

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 06 Issue : 269 Friday 15-03-2024 E-mail : maruti.b.hosamani76@gmail.com Page: 4 Price : Rs. 1/-


## ಹೆಣ್ಣಿನ ಭಾವನೆ...




ಮಗಳ ರೂಪದಲ್ಲಿರುವ ಹೆಣ್ಣಿನ ಭಾವನೆಗಳನ್ನು ತಂದೆ ಅರ್ಥ ಮಾಡಿಕೊಳ್ಳಬೇಕು....
ತಾಯಿ ರೂಪದಲ್ಲಿರುವ ಹೆಣ್ಣಿನ ಭಾವನೆಗಳನ್ನು ಮಗ ಅರ್ಥ ಮಾಡಿಕೊಳ್ಳಬೇಕು...
ಹೆಂಡತಿ ರೂಪದಲ್ಲಿರುವ ಹೆಣ್ಣಿನ ಭಾವನೆಗಳನ್ನು ಗಂಡ ಅರ್ಥ ಮಾಡಿಕೊಳ್ಳಬೇಕು...
ಸೊಸೆ ರೂಪದಲ್ಲಿರುವ ಹೆಣ್ಣಿನ ಭಾವನೆಗಳನ್ನು ಮಾವ ಅರ್ಥ ಮಾಡಿಕೊಳ್ಳಬೇಕು...
ಗೆಳತಿಯ ರೂಪದಲ್ಲಿರುವ ಹೆಣ್ಣಿನ ಭಾವನೆಗಳನ್ನು ಗೆಳೆಯ ಅರ್ಥಮಾಡಿಕೊಳ್ಳಬೇಕು...
ದೇವತೆಯ ರೂಪದಲ್ಲಿರುವ ಹೆಣ್ಣಿನ ಭಾವನೆಗಳನ್ನು ದೇವರು ಅರ್ಥ ಮಾಡಿಕೊಳ್ಳಬೇಕು...
ಪ್ರೇಯಸಿಯ ರೂಪದಲ್ಲಿರುವ ಹೆಣ್ಣಿನ ಭಾವನೆಗಳನ್ನು ಪ್ರಿಯಕರ ಅರ್ಥ ಮಾಡಿಕೊಳ್ಳಬೇಕು...

ಹೆಣ್ಣಿನ ಜೀವನದ ಪ್ರತಿ ಹಂತದ ಭಾವನೆಗಳನ್ನು ಅರ್ಥ ಮಾಡಿಕೊಂಡಾಗ ಮಾತ್ರ ಪುರುಷನ ಬದುಕಿಗೆ ಒಂದು ಅರ್ಥ... ತಾವುಗಳು ಮಹಿಳೆಯಾದರೆ ಹೆಮ್ಮೆಪಡಿ, ಪುರುಷನಾದರೆ ಮಹಿಳೆಯನ್ನು ಗೌರವಿಸಿ...

–ಶ್ರೀ ಮುತ್ತು. ಯ. ವಡ್ಡರ ಶಿಕ್ಷಕರು, ಬಾಗಲಕೋಟ
ಮೊ : 9845568484

## ಪೊಳ್ಳು ಭರವಸೆ ಸುಳ್ಳು ಹೇಳುವವರ ಮಾತಿಗೆ ಮರುಳಾಗದಿರಿ–ಎಸ್ ಭೀಮನಾಯಕ ಕೆಎಂಎಫ್ ರಾಜ್ಯಾಧ್ಯಕ್ಷರು

**ಗಾಣಗಟ್ಟೆ :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಗಾಣಗಟ್ಟೆ ಗ್ರಾಮದಲ್ಲಿ ದಿನಾಂಕ 13 ಮಾರ್ಚ್ 2024 ಬುಧವಾರ ದಂದು ರಾ /ಬ /ಕೊ /ಹಾಗೂ ವಿಜಯನಗರ ಜಿಲ್ಲಾ ಒಕ್ಕೂಟದ ಚುನಾವಣೆ ಪೂರ್ವ ಭಾವಿ ಸಭೆ ಜರುಗಿತು ಈ ಸಂದರ್ಭದಲ್ಲಿ ಮಾತನಾಡಿ ದ ಕೆ. ಎಂ. ಎಫ್. ರಾಜ್ಯ ಅಧ್ಯಕ್ಷರಾದ ಎಸ್ ಭೀಮನಾಯ್ಕ ಅವರು ಮಾತನಾಡಿ ಇದೆ ತಿಂಗಳು ನಮ್ಮ ಒಕ್ಕೂಟದ ಚುನಾವಣೆ ಜರುಗುವ ಸಾಧ್ಯತೆ ಇದ್ದು ಎಲ್ಲರೂ ಒಗ್ಗಟ್ಟಿನಲ್ಲಿ ಚುನಾವಣೆ ಎದುರಿಸೋಣ ಎಂದರು ನಮ್ಮ ಒಕ್ಕೂಟದಲ್ಲಿ ಈಗಿರುವ 4 ಸ್ಥಾನ ಬದಲಾಗಿ 6 ಸ್ಥಾನ ಸಿಗುವ ಬಗ್ಗೆ ಮಾಹಿತಿಯನ್ನು ನೀಡಿ–ದರು. ನಾನು ಒಕ್ಕೂಟದ ಅಧ್ಯಕ್ಷರು ಆಗಿದ್ದು ಇದುವರೆಗೂ ಕೂಡ ನಮ್ಮ ಭಾಗದ ತಾಲೂಕಿಗೆ ಸಿಗಬೇಕಾದ ಮಾನ್ಯತೆ ಸರಿಯಾಗಿ ಸಿಗುತ್ತಿರಲಿಲ್ಲ ನಾನು ಸಹಕಾರ ರಂಗಕ್ಕೆ ಬಂದಿದ್ದು ಅನಿವಾರ್ಯ ಆದರೇ ರಾ, ಬ. ಕೊಪ್ಪಳ ಮತ್ತು ವಿಜಯನಗರ ಒಕ್ಕೂಟ ಅಧ್ಯಕ್ಷನಾಗಿ ಬಂದ ಮೇಲೆ ಗೊತ್ತಾಯಿತು



ಇಲ್ಲಿ ರೈತರ ಸಂಸ್ಥೆ ಇದರಲ್ಲಿ ಬರಲು ತುಂಬಾ ಹೆಮ್ಮೆ ಅನಿಸುತ್ತಿದೆ ಎಂದು ಅದೇ ರೀತಿ ನಾನು ರಾಜ್ಯ ಅಧ್ಯಕ್ಷನಾಗಿ ಕೂಡ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ್ದು ಇಲ್ಲಿ ನೆರೆದಿರುವ ಎಲ್ಲಾರ ಆಶೀರ್ವಾದ ದಿಂದ ನಾನು ಆಗಿರುವೆ ಎಂದರು ಅದೇ ರೀತಿ ನಾನು ಯಾವುದೇ ರೀತಿಯ ಸಂಭಾವನೆ ಪಡೆದಿಲ್ಲ ಮತ್ತು ಒಕ್ಕೂಟ್ಟದಲ್ಲಿಯೂ ಕೂಡ ನಾನು ಸಂಭಾವನೆ ಪಡೆದಿಲ್ಲ ಏಕೆಂದರೆ ಇದು ರೈತರ ಬೆವರಿನ ಹನಿ ಇದನ್ನು ಅನಾವಶ್ಯಕಾವಾಗಿ ಖರ್ಚು ಮಾಡಲು ನನಗೆ ಮನಸ್ಸಿಲ್ಲ ನಾನು ರೈತರ ಪರವಾಗಿ ಕೆಲಸ ಮಾಡಲು ಬಂದಿದ್ದೇನೆ ಅದೇ ರೀತಿ ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಮುಂದೆ ಕೂಡ ನಾನು ನನ್ನ ಶಕ್ತಿ ಮೀರಿ ರೈತರಿಗೆ ಅನುಕೂಲ ಮಾಡಲು ನಿಮ್ಮನ್ನು ನಾನು ಕೇಳುತ್ತಿದ್ದೇನೆ ಮತ್ತೊಮ್ಮೆ ನನಗೆ ಮತ್ತು ನನ್ನ ತಂಡಕ್ಕೆ ಅವಕಾಶ ಕಲ್ಪಿಸಿ ಕೊಡಿ ಈಗ ಮಾಡಿರುವ ಅಭಿವೃದ್ಧಿ ಜೊತೆಗೆ ಇನ್ನೂ ಅನೇಕ ಯೋಜನೆಗಳು ಜಾರಿ ಮಾಡುವುದರ ಜೊತೆಗೆ ನಮ್ಮ ರೈತರಿಗೆ ಅನುಕೂಲ ವಾಗುವ ಯೋಜನೆ ತರಬೇಕು ಈಗಾಗಲೇ ಹೊಸಪೇಟೆಯಲ್ಲಿ ಪಶು ಆಹಾರ ಘಟಕ ಕೇಂದ್ರ ಮತ್ತು ಇನ್ನೂ ಮುಂದೆ ನಂದಿನಿ ಉತ್ಪನ್ನ ಘಟಕ ನಂದಿನಿ ನೀರಿನ ತಯಾರಿಕಾ ಘಟಕ ಇನ್ನೂ ಅನೇಕ ಯೋಜನೆಗಳನ್ನು ಪ್ರಾರಂಭ ಮಾಡಿ ನಮ್ಮ ಸ್ಥಳೀಯ ಜನರಿಗೆ ಉದ್ಯೋಗ ಕಲ್ಪಿಸಲು ನನ್ನ ಮುಂದಿನ ಗುರಿ ಇದೆ ಹಾಗೆ ಕೂಡ್ಲಿಗಿ ಕೊಟ್ಟೂರು ಹರಪನಹಳ್ಳಿ ಹಡಗಲಿ ಹಗರಿಬೊಮ್ಮನಹಳ್ಳಿ ಹೊಸಪೇಟೆ ಹಾಲು ಉತ್ಪದಕರ ಸಹಕಾರ ಸಂಘಗಳ ಮತದಾರರಾದ ನೀವು ಎಲ್ಲರೂ ಒಗ್ಗಟ್ಟಾಗಿ ನೀವು ಯಾವುದೇ ರೀತಿಯ ಪೊಳ್ಳು ಭರವಸೆ ಮತ್ತು ಸುಳ್ಳು ಹೇಳುವವರ ಮಾತಿಗೆ ಮರುಳಾಗದೆ ನಮ್ಮ ತಂಡದ ಎಲ್ಲಾ ಸದಸ್ಯರು ಜಯಶೀಲರಾಗ ಬೇಕು ಯಾವ ಕಾರಣಕ್ಕೂ ನೀವು ಬದಲಾವಣೆ ಮಾಡದೆ 4 ಸ್ಥಾನ ಆಗಲಿ ಅಥವಾ 6 ಸ್ಥಾನ ಆಗಲಿ ನಮ್ಮ ತಂಡ ಎಲ್ಲಾರಿಗೂ ಆಶಿರ್ವಾದ ಮಾಡಿ ಎಂದರು ಎಲ್ಲರೂ ನಿಮ್ಮ ಸೇವೆ ನಮಗೆ ಅಗತ್ಯ ಬೇಕು ನಮ್ಮ ರೈತರಿಗೆ ಅನುಕೂಲ ವಾಗಬೇಕು ಹೈನುಗಾರಿಕೆ ಇನ್ನು ಉತ್ತಮ ಮಟ್ಟಕ್ಕೆ ಬೆಳೆಯಲು ನಿಮ್ಮ ಸೇವೆ ಅಗತ್ಯವಾಗಿ ಬೇಕು ನಾವೆಲ್ಲಾ ನಿಮ್ಮೊಂದಿಗೆ ಇದ್ದೇವೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಹೆಚ್.ಮರುಳಸಿದ್ದಪ್ಪ ನಿರ್ದೇಶಕರು ರಾ. ಬ. ಕೊ. ಮತ್ತು ವಿಜಯನಗರ ಜಿಲ್ಲಾ ಹಾಲು ಒಕ್ಕೂಟ ಜಿಂಕಾಲ್ ನಾಗಮಣಿ ರಾ. ಬ. ಕೊ. ವಿಜಯನಗರ ಹಾಲು ಒಕ್ಕೂಟ ಐ ಗೋಳು ಚಿದಾನಂದ ನಿರ್ದೇಶಕರು ಬಿ. ಡಿ. ಸಿ. ಸಿ.ಬ್ಯಾಂಕ್ ಹೊಸಪೇಟೆ ದ್ವಾರಕೀಶ್ ಉಪಾಧ್ಯಕ್ಷರು ಬಿ. ಡಿ. ಸಿ ಸಿ ಬ್ಯಾಂಕ್ ಹೊಸಪೇಟೆ ಮತ್ತು ವಿಜಯನಗರ ಜಿಲ್ಲಾ ಎಲ್ಲಾ ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಮತದಾನ ಅರ್ಹತೆ ಪಡೆದಿರುವ ಎಲ್ಲಾರು ಹಾಜರಿದ್ದರು ಮತ್ತು ಉಪಸ್ಥಿತರಿದ್ದರು.

**–ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

## ಮಹಾ ಶಿವಶರಣೆ ಸಜ್ಜಲಗುಡ್ಡದ ಶರಣಮ್ಮ ತಾಯಿಯ ಮಹಾಪುರಾಣ

**ಕಲಕೇರಿ :** ತಾಳಿಕೋಟಿ ತಾಲೂಕಿನ ಕಲಕೇರಿ ಗ್ರಾಮದಲ್ಲಿ ಶ್ರೀ ಗುರು ಮರುಳಾರಾಧ್ಯ ಸಂಸ್ಥಾನ ಹಿರೇಮಠದಲ್ಲಿ ನಾಳೆ ದಿನಾಂಕ. 15.03.2024. ಸಾಯಂಕಾಲ 07. ಗಂಟೆಯಿಂದ. ಮಹಾ ಶಿವಶರಣೆ ಸಜ್ಜಿಲಗುಡ್ಡದ ಶರಣಮ್ಮ ತಾಯಿಯ ಮಹಾಪುರಾಣ ಪ್ರಾರಂಭ ಕಲಕೇರಿ ಗ್ರಾಮಸ್ಥರು ತಾಯಂದರು ಸುತ್ತಮುತ್ತಲಿನ ಹಳ್ಳಿಯ ಗ್ರಾಮಸ್ಥರು ತಾಯಂದರು ಮಹಾಪುರಾಣದಲ್ಲಿ ಎಲ್ಲಾ ಭಕ್ತರು ಪಾಲ್ಗೊಂಡು ಗುರುಗಳಿಂದ ಆಶೀರ್ವಾದ ಪಡೆದು ಕೊಳ್ಳಬೇಕು ಎಂದು ಸರ್ವ ಭಕ್ತಾದಿಗಳಿಗೆ ಸ್ವಾಗತ ಕೋರಿದ್ದಾರೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ. ತಾಳಿಕೋಟೆ**






## ರಬಕವಿ–ಬನಹಟ್ಟಿಯಲ್ಲಿ ಶ್ರದ್ಧೆ, ಭಕ್ತಿಯ ಶಿವರಾತ್ರಿ



**ರಬಕವಿ–ಬನಹಟ್ಟಿ :** ಅವಳಿ ನಗರಗಳಲ್ಲಿ ಶುಕ್ರವಾರ ಶ್ರದ್ಧೆ ಭಕ್ತಿಯಿಂದ ಮಹಾಶಿವರಾತ್ರಿಯನ್ನು ಆಚ–ರಿಸಲಾಯಿತು.

ಸ್ಥಳೀಯ ಸೋಮವಾರ ಪೇಟೆಯ ಬನಹಟ್ಟಿಯ ಮಹಾದೇವರ ದೇವಸ್ಥಾನ ಹಾಗೂ ರಬಕವಿಯ ಮಹಾದೇವರ ದೇವಸ್ಥಾನದಲ್ಲಿ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಿಗ್ಗೆ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಭಿಷೇಕದ ನಂತರ ದೇವಸ್ಥಾನದ ಮೇಲಿರುವ ಮಹಾದೇವರ ಪ್ರತಿಮೆಯನ್ನು ಹೂ ಮಾಲೆಗಳಿಂದ ಅಲಂಕಾರ ಮಾಡಲಾಗಿತ್ತು.

ಭಕ್ತರು ಬೆಳಿಗ್ಗೆ ಬನಹಟ್ಟಿ ನಗರದ ಕಾಡಸಿದ್ಧೇಶ್ವರ ಹಾಗೂ ಅವಳಿ ನಗರದ ವಿವಿಧ ದೇವಸ್ಥಾನಗಳಿಗೆ ತೆರಳಿದರೆ, ಮಧ್ಯಾಹ್ನ ಮಹಿಳೆಯರು ನೈವೇದ್ಯದೊಂದಿಗೆ ದೇವಸ್ಥಾನಗಳಿಗೆ ತೆರಳಿ ನೈವೇದ್ಯವನ್ನು ಅರ್ಪಿಸಿದರು.

ಸಂಜೆಯಾಗುತ್ತಿದ್ದಂತೆ ನಗರದ ಪ್ರಮುಖ ದೇವಸ್ಥಾನಗಳಲ್ಲಿ ಭಕ್ತರು ದೇವರ ದರ್ಶನ ಪಡೆದುಕೊಂಡರು.

**ಗೆಣಸಿಗಾಗಿ ಮುಗಿಬಿದ್ದ ಜನ:** ಮಹಾಶಿವರಾತ್ರಿಯ ಅಂಗವಾಗಿ ಜನರು ಗೆಣಸು ಮತ್ತು ಹಣ್ಣುಗಳನ್ನು ಖರೀದಿ ಮಾಡಲು ಮುಗಿಬಿದ್ದರು. ಬಾಳೆ ಹಣ್ಣು, ಚಿಕ್ಕು , ದ್ರಾಕ್ಷಿ, ಖರ್ಜುರ ಸೇರಿದಂತೆ ಅನೇಕ ಹಣ್ಣಗಳಿಗೆ ಸಾಕಷ್ಟು ಬೇಡಿಕೆ ಇತ್ತು. ಬಾಳೆ ಹಣ್ಣುಗಳು ದುಪ್ಪಟ್ಟು ಬೆಲೆಗೆ ಮಾರಾಟಗೊಂಡವು. ಮಾರುಕಟ್ಟೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಗೆಣಸು ಮಾರಾಟಗಾರರು ಆಗಮಿಸಿದ್ದರು.

**ಉತ್ತರಾಣಿ ಕಡ್ಡಿಗಳಿಗೆ ಬೇಡಿಕೆ:** ಶಿವರಾತ್ರಿಯ ಸಂದರ್ಭದಲ್ಲಿ ಉತ್ತರಾಣಿ ಕಡ್ಡಿಗಳನ್ನು ಭಕ್ತರು ಖರೀದಿ ಮಾಡಿದರು. ಉತ್ತರಾಣಿ ಕಡ್ಡಿಗಳನ್ನು ಸ್ವಚ್ಛಗೊಳಿಸಿದ ನಂತರ ಅವುಗಳ ತುದಿಗೆ ಹತ್ತಿಯನ್ನು ಸುತ್ತಿ ತುಪ್ಪದಲ್ಲಿ ನೆನೆಸಿದ ನಂತರ ದೇವರಿಗೆ ಬೆಳಗುತ್ತಾರೆ.

ಸೇಂಗಾ, ಖರ್ಜೂರು, ಸಾಬೂದಾನಿ, ಬೆಲ್ಲ ಸೇ–ರಿದಂತೆ ಶಿವರಾತ್ರಿಗೆ ಬೇಕಾದ ವಸ್ತುಗಳಿಗೆ ಭಾರಿ ಬೇಡಿಕೆ ಇತ್ತು.

## ತೇರದಾಳದಲ್ಲಿ ಶಿವರಾತ್ರಿ ಸಂಭ್ರಮ



**ತೇರದಾಳ :** ಪಟ್ಟಣದಲ್ಲಿ ಶಿವರಾತ್ರಿಯನ್ನು ಶ್ರದ್ಧೆ ಭಕ್ತಿ ಸಂಭ್ರಮದಿಂದ ಜನತೆ ಆಚರಿಸಿದರು. ಕ್ಷೇತ್ರಾಧಿಪತಿ ಅಲ್ಲಮಪ್ರಭು ದೇವಸ್ಥಾನ, ರಬಕವಿ ರಸ್ತೆಯ ನೀಲಕಂಠೇಶ್ವರ ಮಠ, ಗುರುದೇವ ಬ್ರಹ್ಮಾನಂದ ಆಶ್ರಮ, ದೇವರಾಜ ನಗರದ ಶಿವಾನಂದ ಮಠ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವ ವಿದ್ಯಾಲಯ, ಗಾಯತ್ರಿದೇವಿ ದೇವಸ್ಥಾನ ಸೇರಿದಂತೆ ಬಹುತೇಕ ದೇವಸ್ಥಾನಗಳಲ್ಲಿ ಪೂಜೆ, ಜಪ, ಅಭಿಷೇಕ, ಕಡಬತ್ತಿ ಸುಡುವುದು, ಜಾಗರಣೆ ಹಲವು ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಶಿವರಾತ್ರಿ ನಿಮಿತ್ತ ಉಪವಾಸ ಇರುವುದು ವಾಡಿಕೆ ಇರುವುದರಿಂದ ಶಾಬುದಾನಿ, ಶೇಂಗಾ, ಖರ್ಜೂರ, ಹಣ್ಣು, ಗೆಣಸು ಇತ್ಯಾದಿ ಪದಾರ್ಥಗಳ ಮಾರಾಟ ಭರ್ಜರಿಯಾಗಿ ನಡೆಯಿತು. ಮದ್ಯಾಹ್ನ 12 ಗಂಟೆಗೆ ಬಿಸಿಲಿನ ಪ್ರಖರತೆ ತೀವ್ರಗೊಳ್ಳುತ್ತಿದ್ದಂತೆ ಜನರು ಹೊರಗೆ ಬದರೆ ಮನೆಯಲ್ಲಿಯೇ ಶಿವ ಶಿವ ಎಂದು ಕುಳಿತುಕೊಂಡರು.

## ಬೋರವೆಲ್ ಕೊರೆಸಿ ನೀರಿನ ಅನುಕೂಲ ಪಟ್ಟಣದ ವಾರ್ಡಿನ ಜನರಿಗೆ ಸಂತಸ!

**ದೇವರ ಹಿಪ್ಪರಗಿ :** ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನ ದೇವರ ಹಿಪ್ಪರಗಿ ಪಟ್ಟಣದ 13 ನೇ ವಾರ್ಡಿನಲ್ಲಿ 3 ಬೋರವೆಲ್ ಕೊರೆಸಲಾಯಿತು. ಅದರಲ್ಲಿ ಎರಡು ಬೋರ್ವೆಲ್ ಗಳಲ್ಲಿ ನೀರು ಬಿದ್ದಿದ್ದು. ವಾರ್ಡಿನ ಜನರಲ್ಲಿ ಸಂತಸ ಮೂಡಿದೆ.13 ನೇ ವಾರ್ಡಿನ್ ಸದಸ್ಯರಾದ ರಮೇಶ್ ಮಸೀಬಿನಾಳ ಮಾತನಾಡಿ ನಾನು ಈ ವಾರ್ಡಿನ ಸದಸ್ಯನಾದ ಮೇಲೆ ಕಳೆದ ಎರಡು ವರ್ಷದಲ್ಲಿ 6 ರಿಂದ 7 ಸಿಸಿ ರಸ್ತೆಗಳು ಮಾಡಿಸಿದ್ದೇನೆ 2,3 ಓಣಿಗಳಲ್ಲಿ ವಿದ್ಯುತ್ ಸಂಪರ್ಕ ಮತ್ತು ಸರಿಯಾಗಿ ಚರಂಡಿ




ವ್ಯವಸ್ಥೆ ಇದ್ದಿಲ್ಲ. ಅವೆಲ್ಲವನ್ನೂ ಸರಿ ಮಾಡಿದ್ದೇನೆ, ಕುಡಿಯುವ ನೀರಿನ ವ್ಯವಸ್ಥೆ ವಾರ್ಡಿನಲ್ಲಿ ಸಂಪೂರ್ಣವಾಗಿ 13 ನೇ ವಾರ್ಡಲ್ಲಿ ನೀರಿನ ಸಮಸ್ಯೆ ಇದಿದ್ದಕ್ಕೆ ಈ ಬೋರವೇಲ್ ಗಳು ಹಾಕಿ ಜನತೆಯ ಅನುಕೂಲ ಮಾಡಿದ್ದೇನೆ. ಹಾಗೂ ಇನ್ನೊಂದು ದೊಡ್ಡ ಸಮಸ್ಯೆ ಅಂದ್ರೆ ಮಹಿಳೆಯರಿಗೆ ಶೌಚಾಲಯ ಸಮಸ್ಯೆ ಇದೆ ಅದನ್ನು ಈಗಾಗಲೇ ಬಹಳಷ್ಟು ಬಾರಿ ಮುಖ್ಯಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಅವರಿಂದ ಯಾವುದೇ ರೀತಿ ಸ್ಪಂದನೆ ನನಗೆ ಸಿಕ್ಕಿಲ್ಲ, ಕೂಡಲೇ ಮಹಿಳೆಯರಿಗೆ ಸಾರ್ವಜನಿಕ ಶೌಚಾಲಯ ನಿರ್ಮಿಸಿ ಕೊಡಬೇಕು ಇಲ್ಲವಾದಲ್ಲಿ ವಾರ್ಡಿನ ಜನತೆ ಜೊತೆ ಪಟ್ಟಣ ಪಂಚಾಯತ್ ಮುಂದೆ ಧರಣಿ ಸತ್ಯಾಗ್ರಹ ಮಾಡುತ್ತೇನೆ ಎಂದು ಮುಖ್ಯಾಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ವಾರ್ಡಿನಲ್ಲಿ ತಾವು ಮಾಡಿರುವ ಕೆಲಸದ ಬಗ್ಗೆ ಹೇಳಿದರು.

ಈ ಸಂದರ್ಭದಲ್ಲಿ ಈರಣ್ಣ ಒಂಟೆತಿನ, ಸದಯ್ಯ ಇಂಡಿ, ಸಲಬಯ್ಯ ಸದಯಾನಮಠ, ಸುರೇಶ ಒಂಟೆತಿನ, ಮುತ್ತು ಜಾಲಗಾರ, ಬುಡ್ಡಾ ಬೆಪಾರಿ, ಮಂಜು ಒಂಟೆತಿನ, ಈರಯ್ಯ ಇಂಡಿಮಠ,

ಯಾಸಿನ್ ಹಚ್ಯಾಳ ಬಸವರಾಜ್ ವಂಟೆತ್ತಿನ , ಶಂಕ್ರಪ್ಪ ಜಂಬಗಿ, ಅಪ್ಪಸಾಹೇಬ ವಾಡಿದಮನಿ, ಇತರರು ಇದ್ದರು.

**ವರದಿ:ಮಹಾಂತೇಶ. ಹಾದಿಮನಿ.ವಿಜಯಪುರ**

## ಕಂಬಳಿ ನೇಕಾರರಿಗೆ ಬೇಕಿದೆ ಆಸರೆ

◆ ಮಲ್ಲಿಕಾರ್ಜುನ ತುಂಗಳ

**ರಬಕವಿ–ಬನಹಟ್ಟಿ :** ಕಂಬಳಿ ತಯಾ–ರಿಸುವ ಕಾಯಕ ಕುರುಬ ಸಮುದಾಯಕ್ಕೆ ಅವರ ಹಿರಿಯರಿಂದ ಬಂದ ಬಳುವಳಿ. ಮೊದಲು ಕುರಿ ಕರಿಗಾಯಿಗಳ ಹತ್ತಿರ ಹೋಗಿ ಜವಾರಿ ಕುರಿಗಳ ತುಪ್ಪಳವನ್ನು ಕತ್ತರಿಸಿ ಸಂಗ್ರಹಿಸಿ ಅದರ ಹಂಜಿಯನ್ನು ಮಾಡಲಾಗುತ್ತದೆ. ನಂತರ ಗಾಂಧಿ ಚರಕದಲ್ಲಿ ನೂಲುವದು ಮಹಿಳೆಯರದ್ದು. ನಂತರ ಕಂಬಳಿ ನೂಲುಗಳನ್ನು ಜೋಡಿಸಿ ನೇಯ್ಗೆ ಮಾಡಿ ಗಂಜಿಯನ್ನು ಸವರಿ ಬಿಸಿಲಿನಲ್ಲಿ ಒಣಗಿಸಿದಾಗ ಒಂದು ಕಂಬಳಿ ಸಿದ್ಧವಾಗುತ್ತದೆ. ಒಂದು ಕಂಬಳಿ ನೇಯ್ಗೆಗೆ ಕನಿಷ್ಠ ಎರಡು ದಿನ ಬೇಕೇ ಬೇಕು.

ಇಡೀ ರಬಕವಿ–ಬನಹಟ್ಟಿಯಾದ್ಯಂತ ನೂರಾರು ಕುರುಬ ಸಮುದಾಯದ ಮೂಲ ಕಸಬಾಗಿದ್ದ ಕಂಬಳಿ ತಯಾ–ರಿಕೆಯು ಸರ್ಕಾರದ ಪೂರಕ ಬೆಂಬಲವಿಲ್ಲದೆ ಇದೀಗ ಕೇವಲ ಒಂದೇ ಒಂದು ಕುಟುಂಬ ಈ ಕಾಯಕದಲ್ಲಿ ತೊಡಗಿರುವದು ಆತಂಕಕಾರಿ ಬೆಳವಣಿಗೆಗೆ ಕಾರಣ.

ಬನಹಟ್ಟಿಯ ಸೋಮವಾರ ಪೇಟೆಯಲ್ಲಿನ ಮಲ್ಲಪ್ಪ ತುಂಗಳ ಎಂಬ ನೇಕಾರ ಮಾತ್ರ ಕಂಬಳಿ ನೇಯ್ಗೆ ಮಾಡುವದರಲ್ಲಿ ತೊಡಗಿದ್ದು, ಉಳಿದೆಲ್ಲ ಕುಟುಂಬಗಳು ಇದರಿಂದ ದೂರ ಉಳಿಯುವಲ್ಲಿ ಕಾರಣವಾಗಿದೆ.


'ಅಂಬಲಿಗಿಂತ ಉಂಬಳಿಯಿಲ್ಲ ಕಂಬಳಿಗಿಂತ ಹಾಸಿಗೆಯಿಲ್ಲ' ಎಂಬ



**ಬನಹಟ್ಟಿಯಲ್ಲಿ ಕಂಬಳಿ ತಯಾರಕ ಮಲ್ಲಪ್ಪ ತುಂಗಳ**

ಹಿರಿಯರ ನಾಣ್ಣುಡಿ ಎಷ್ಟು ಸತ್ಯವೆಂಬುದು ಕಂಬಳಿ ಉಪಯೋಗಿಸಿದವರಿಗೆ ಮಾತ್ರ ತಿಳಿಯುವದು. ಮದುವೆ, ಕೆಲವು ಸಮುದಾಯಗಳ ಪೂಜೆ, ಮತ್ತಿತರ ಧಾರ್ಮಿಕ ಕಾರ್ಯಗಳಲ್ಲಿ ಬಳಕೆ ಮಾಡುತ್ತಾರೆ. ಈ ಕಂಬಳಿ ತಯಾರಿಸುವ ಕಲೆ ಅದ್ಭುತ ಮತ್ತು ಕಷ್ಟದಾಯಕವಾದ ಕರಕುಶಲ ಕಲೆ ಇದೀಗ ನೇಪಥ್ಯಕ್ಕೆ ಸರಿಯುತ್ತಿರುವದು ಬೇಸರ ತರುವಂಥ–ದ್ದು.

**ರಗ್ಗುಗಳ ಭರಾಟೆ ಕಾರಣ:** ಕಂಬಳಿಯ ಮಾರುಕಟ್ಟೆಯನ್ನು ರಗ್ಗುಗಳು ಆಕ್ರಮಿಸುತ್ತಿವೆ. ನಕಲಿ ಅಥವಾ ಉಣ್ಣೆ ನೂಲು ಉಪಯೋಗಿಸದೆ ಕಂಬಳಿಯು ಮಾರುಕಟ್ಟೆಯಲ್ಲಿ ಬಂದ ಕಾರಣ ಚುಚ್ಚುವ ಗುಣದಿಂದಾಗಿ ಕಂಬಳಿ



**'ಕಂಬಳಿ ನೇಯ್ಗೆಯಿಂದ ಉತ್ತಮ ಲಾಭವೇನೂ ಇಲ್ಲ. ಹಿರಿಯರ ಪರಂಪರೆ ಉಳಿಸಬೇಕೆಂಬುದಾಗಿದೆ. ಅದೂ ಸಾಧ್ಯವಾಗುತ್ತಿಲ್ಲ. ಸರ್ಕಾರ ಗಮನಹರಿಸಿದ್ದಲ್ಲಿ ಈ ಕಸಬು ಮುಂದುವರೆಯಲು ಸಾಧ್ಯ'.**

◆ ಮಲ್ಲಪ್ಪ ತುಂಗಳ, ಕಂಬಳಿ ತಯಾರಕ.

ಖರೀದಿಸುವವರು ಕಡಿಮೆಯಾಗಿದ್ದಾರೆ. ರಗ್ಗುಗಳು ನುಣುಪಾಗಿ, ಅಂ–ದಾಗಿರುವದರಿಂದ ಪ್ರತಿ ಹಳ್ಳಿಗೂ ಜನ ಮಾರಾಟಕ್ಕೆ ಬರುತ್ತಿರುವದರಿಂದ ಸಾಂಪ್ರದಾಯಕ ಉಣ್ಣೆ ಕಂಬಳಿಗಳು ಮೂಲೆ ಸೇರುವಲ್ಲಿ ಕಾರಣವಾಗಿದೆ.

**ನಿರ್ವಹಣೆ ಕಷ್ಟ:** ಒಂದು ಕಂಬಳಿ ನೇಯ್ಗೆಗೆ 3 ರಿಂದ 5 ಕೆಜಿ ಕುರಿ ಉಣ್ಣೆ ಬೇಕು. ಉಣ್ಣೆಯನ್ನು ಹದಗೊಳಿಸಿದ ನಂತರ ನೂಲು ಮಾಡುವದು. ನಂತರ ಮಗ್ಗದಲ್ಲಿ ಕಂಬಳಿ ನೇಯಲು ಮೂರ್‍ನಾಲ್ಕು ದಿನ ಶ್ರಮಬೇಕು. ಮನೆ ಮಂದಿಯೆಲ್ಲ ಕೆಲಸ ಮಾಡಿದರೆ ವಾರಕ್ಕೆರಡು ಕಂಬಳಿ ನೇಯ್ಗೆ ಸಾಧ್ಯ. ಮಾರುಕಟ್ಟೆಯಲ್ಲಿ 1500 ರಿಂದ 2000 ರೂ. ಸಿಗಬಹುದು. ಇದರಿಂದ ಕುಟುಂಬದ ನಿರ್ವಹಣೆ ಕಷ್ಟವೆನ್ನುತ್ತಾರೆ ಮಲ್ಲಪ್ಪ ತುಂಗಳ.

# ವಿಶ್ವ ಶ್ರವಣ ದಿನ ಕಾರ್ಯಕ್ರಮ ಆಚರಣೆ



**ಕೊಪ್ಪಳ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ನಗರದ ಹಳೇ ಜಿಲ್ಲಾ ಆಸ್ಪತ್ರೆ ಆವರಣದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗುರುವಾರದಂದು ವಿಶ್ವ ಶ್ರವಣ ದಿನ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ॥ ಲಿಂಗರಾಜು ಟಿ ಅವರು, ಸರಕಾರದ ವಿವಿಧ ಯೋಜನೆಗಳನ್ನು ಸಾರ್ವಜನಿಕರಿಗೆ ಮುಟ್ಟಿಸುವುದು ನಮ್ಮ ಜವಾಬ್ದಾರಿಯಾಗಿದೆ. ಪ್ರತಿ ವರ್ಷ ಮಾರ್ಚ್–03 ರಂದು "ವಿಶ್ವ ಶ್ರವಣ ದಿನ" ಕಾರ್ಯಕ್ರಮ ಆಚರಿಸಲಾಗುತ್ತದೆ. ಶ್ರವಣದೋಷ ಮತ್ತು ಕಿವುಡುತನ ತಡೆಗಟ್ಟುವಿಕೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. "ಮನಸ್ಥಿತಿಗಳನ್ನು ಬದಲಾಯಿಸುವುದು. ಎಲ್ಲರಿಗೂ ಶ್ರವಣ ಮತ್ತು ಶ್ರವಣ ಆರೈಕೆ ಸೇವೆಗಳನ್ನು ಸಾಫಲ್ಯಗೊಳಿಸೋಣ" ಎಂಬ ಘೋಷವಾಕ್ಯದೊಂದಿಗೆ ಈ ವರ್ಷ ಅರಿವು ಮೂಡಿಸುವ ಕಾರ್ಯಕ್ರಮ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಕಿವಿಯು ಪ್ರತಿಯೊಬ್ಬ ಮನುಷ್ಯನ ಪಂಚೇಂದ್ರಿಯಗಳಲ್ಲಿ ಪ್ರಮುಖ ಅಂಗವಾಗಿದ್ದು, ಅದನ್ನು ಪ್ರತಿಯೊಬ್ಬರೂ ತಮ್ಮ ಜೀವನದುದ್ದಕ್ಕೂ ರಕ್ಷಣೆ ಮಾಡಿಕೊಳ್ಳಬೇಕು. ಕಿವಿಯಲ್ಲಿ ಕಡ್ಡಿ ಹಾಕಬಾರದು, ಎಣ್ಣೆ ಹಾಕಬಾರದು, ರಸ್ತೆಯಲ್ಲಿ ಗುಗ್ಗೆ ತೆಗೆಯುವವರ ಹತ್ತಿರ ಗುಗ್ಗೆ ತೆಗೆಸಿಕೊಳ್ಳಬಾರದು. ವೈದ್ಯರ ಸಲಹೆ ಇಲ್ಲದೆ ಕಿವಿಯಲ್ಲಿ ಏನೂ ಹಾಕಬಾರದು ಮತ್ತು ಕಲುಷಿತ ನೀರಿನಲ್ಲಿ ಈಜಬಾರದು ಎಂದು ತಿಳಿಸಿದರು. ಕಿವಿನೋವು ಅಥವಾ ಸೋರುವಿಕೆ ಕಂಡುಬಂದರೆ ತಮ್ಮ ಸಮೀಪದ ತಾಲೂಕಾ/ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಕಿವಿ, ಮೂಗು, ಗಂಟಲು ತಜ್ಞರನ್ನು ಸಂಪರ್ಕಿಸಬೇಕು ಹಾಗೂ 14 ವರ್ಷದೊಳಗಿನ ಮಕ್ಕಳಿಗೆ ಶ್ರವಣ ಸಾಧನಗಳ ಅವಶ್ಯವಿದ್ದರೆ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುವುದು ಎಂದು ಕ್ಷೇತ್ರಮಟ್ಟದ ಸಿಬ್ಬಂದಿಗಳಾದ ಆಶಾ/ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ತಿಳಿಸಿದರು.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ॥ ರವೀಂದ್ರನಾಥ್ ಎಂ.ಹೆಚ್ ಅವರು ಮಾತನಾಡಿ, ನಮ್ಮ ಕಿವಿಗಳನ್ನು ರಕ್ಷಿಸಿಕೊಳ್ಳಬೇಕು. ಎಲ್ಲರಿಗೂ ಶ್ರವಣ ಸೇವೆಗಳು ಸಿಗುವ ಬಗ್ಗೆ ಮಾಹಿತಿ ನೀಡಬೇಕು. ಈ ವರ್ಷ ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಈ ಕಾರ್ಯಕ್ರಮದಡಿಯಲ್ಲಿ ಪ್ರಾಯೋಗಿಕ ಯೋಜನೆಯಡಿಯಲ್ಲಿ ಜಿಲ್ಲೆಯ ವಿವಿಧ ತಾಲೂಕಾ ಆಸ್ಪತ್ರೆ ಹಾಗೂ ಸ.ಆ.ಕೇಂದ್ರಗಳಲ್ಲಿ ಆಯ್ದ 10 ಆರೋಗ್ಯ ಸಂಸ್ಥೆಗಳಲ್ಲಿ ಉಚಿತ ಕಿವಿ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡು, ದೋಷವಿರುವವರಿಗೆ ಚಿಕಿತ್ಸೆ ನೀಡಿ, ಯಶಸ್ವಿಗೊಳಿಸಲಾಗಿದೆ. ಕಾರ್ಯಕ್ರಮ ಕುರಿತು ಸಾರ್ವಜನಿಕರಿಗೆ ವ್ಯಾಪಕ ಪ್ರಚಾರಕ್ಕಾಗಿ, ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣಗಳಲ್ಲಿ ರೇಡಿಯೋ ಜಿಂಗಲ್ಸ್, ಹೋರ್ಡಿಂಗ್ಸ್, ಜಾನಪದ ಕಲಾತಂಡಗಳಿಂದ ಬೀದಿ ನಾಟಕ ಪ್ರದರ್ಶನ, ಗೋಡೆಬರಹ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸುವುದರ ಮೂಲಕ ಜಿಲ್ಲೆಯಾದ್ಯಂತ ಜಾಗೃತಿ ಅರಿವು ಮೂಡಿಸಲಾಗಿರುತ್ತದೆ ಹಾಗೂ ಕುಟುಂಬ ಕಲ್ಯಾಣ ಕಾರ್ಯಕ್ರಮ ಕುರಿತು, ಕುಟುಂಬ ಕಲ್ಯಾಣ ಯೋಜನೆಗಳಾದ ತಾತ್ಕಾಲಿಕ ಹಾಗೂ ಶಾಶ್ವತ ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಂಡು, ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಅಂತರ ಕಾಪಾಡುವ ಬಗ್ಗೆ, ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗಪತ್ತೆತಂತ್ರವಿಧಾನಗಳಕಾಯ್ದೆ 1994ರ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವಂತೆ, ಕ್ಷೇತ್ರ ಸಿಬ್ಬಂದಿಯವರಿಗೆ ತಿಳಿಸಿದರು. ಜಿಲ್ಲಾ ಭೋಧಕ ಆಸ್ಪತ್ರೆಯ ಕಿವಿ, ಮೂಗು, ಗಂಟಲು ತಜ್ಞರಾದ ಡಾ॥ ಅವಿನಾಶ ಮಾತನಾಡಿ, ರಾಷ್ಟ್ರೀಯ ಶ್ರವಣದೋಷ ನಿವಾರಣಾ ಮತ್ತು ನಿಯಂತ್ರಣ ಕಾರ್ಯಕ್ರಮ ಕುರಿತು, ನವಜಾತ ಶಿಶುವಿನ ಕಿವಿಯ ಆರೈಕೆ ಮತ್ತು ಕಾರ್ಯಕ್ರಮದಡಿಯಲ್ಲಿ ಸಿಗುವ ಸೇವಾ ಸೌಲಭ್ಯಗಳು ಮತ್ತು ಶಸ್ತ್ರಚಿಕಿತ್ಸೆ ಕುರಿತು ವಿವರವಾಗಿ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ॥ಪ್ರಕಾಶ ವಿ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ॥ ನಂದಕುಮಾರ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳಾದ ಡಾ॥ ಶಶಿಧರ ಎ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳಾದ ಡಾ॥ ವೆಂಕಟೇಶ, ತಾಲೂಕಾ ಆರೋಗ್ಯಾಧಿಕಾರಿಗಳಾದ ಡಾ॥ರಾಮಾಂಜನೇಯ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ॥ಮಹೇಶ ಉಮಚಗಿ, ಆಡಿಯೋಲಾಜಿಸ್ಟ್ ಕು॥ ಬಿಂದು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳು, ಆಶಾ/ಅಂಗನವಾಡಿ ಕಾರ್ಯಕರ್ತೆಯರು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳ ತರಬೇತಿ ಕೇಂದ್ರದ ತರಬೇತಿದಾರರು, ಸಾರ್ವಜನಿಕರು ಭಾಗವಹಿಸಿ, ಯಶಸ್ವಿಗೊಳಿಸಿದರು.

## ವಿಶ್ವದ ಬಲಿಷ್ಠ ಅರ್ಥ ವ್ಯವಸ್ಥೆಯಾಗಿಸುವ ಗುರಿ ಹೊಂದಿದ್ದೇವೆ: ಸಂಸದ ಈರಣ್ಣ ಕಡಾಡಿ



ಬೆಳಗಾವಿ : ಹತ್ತು ವರ್ಷಗಳ ಹಿಂದೆ ಜಗತ್ತಿನಲ್ಲಿ ದುರ್ಬಲ ಆರ್ಥಿಕತೆಯ ರಾಷ್ಟ್ರ ಎಂದೇ ಬಿಂಬಿತವಾಗಿದ್ದ ಭಾರತ, ಈಗ ಪ್ರಧಾನಿ ನರೇಂದ್ರ ಮೋದಿ ಅವರ ದಕ್ಷ, ಸಮರ್ಥ ಆಡಳಿತದ ಪರಿಣಾಮ ಐದನೇ ಶಕ್ತಿಯುತ ರಾಷ್ಟ್ರವಾಗಿ ಹೊರಹೊಮ್ಮಿದೆ. ಇದನ್ನು ಮೂರನೇ ಸ್ಥಾನಕ್ಕೆ ಕೊಂಡೊಯ್ಯುವ ಗುರಿ ಹೊಂದಲಾಗಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದ್ದಾರೆ.

ಬೆಳಗಾವಿ ಆಂಜನೇಯ ನಗರ (ಕೆ.ಎಂ.ಎಫ್.ಡೇರಿ) ಹತ್ತಿರ ರಾಜ್ಯಸಭಾ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದ 10 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾದ ನೂತನ ಬಸ್ ಪ್ರಯಾಣಿಕರ ತಂಗುದಾಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಮೋದಿ ಗ್ಯಾರಂಟಿ ಬಗ್ಗೆ ಮಾತ್ರ ಜನರಿಗೆ ವಿಶ್ವಾಸವಿದೆ. ಉಳಿದ ಗ್ಯಾರಂಟಿಗಳ ಬಗ್ಗೆ ವಿಶ್ವಾಸ ಇಲ್ಲ. ಸಮಾಜದ ಕಟ್ಟಕಡೆ–ಯ ವ್ಯಕ್ತಿಗೂ ಯೋಜನೆಯ ಸವಲತ್ತು ತಲುಪಬೇಕು ಎಂಬ ದೃಷ್ಟಿಕೋನದ ಹಿನ್ನಲೆಯಲ್ಲಿ ಪಕ್ಷದ ಧ್ಯೇಯವನ್ನು ಪ್ರಧಾನಿಯವರು ಈಡೇರಿಸಿದ್ದಾರೆ. ದೇಶದ 12 ಕೋಟಿ ರೈತರಿಗೆ ಕಿಸಾನ್ ಸಮ್ಮಾನ ಯೋಜನೆಯಡಿ ಪ್ರತಿ ವರ್ಷ 6 ಸಾವಿರ ರೂಪಾಯಿಗಳನ್ನು ನೀಡಿದ್ದೇವೆ. 4 ಕೋಟಿ ಮನೆ ನಿರ್ಮಾಣ ಮಾಡಿದೆ. 10 ಕೋಟಿ ಮಹಿಳೆಯರಿಗೆ ಉಚಿತ ಉಜ್ವಲಾ ಗ್ಯಾಸ ಸಿಲಿಂಡರ್ ವಿತರಿಸಲಾಗಿದೆ, 12ಕೋಟಿ ಬಡವರ ಮನೆಗಳಿಗೆ ಶೌಚಾಲಯ ನಿರ್ಮಾಣ ಮಾಡಲಾಗಿದೆ, 55 ಕೋಟಿ ಜನರಿಗೆ ಆಯುಷ್ಮಾನ ಭಾರತ ಯೋಜನೆಯಡಿ ರೂ.5ಲಕ್ಷದವರೆಗೆ ಉಚಿತ ಚಿಕಿತ್ಸೆ, ದೇಶದ 81 ಕೋಟಿ ಜನರಿಗೆ ಉಚಿತ ಪಡಿತರ ನೀಡಲಾಗಿದೆ ಎಂದರಲ್ಲದೇ ಮುಂದಿನ 5 ವರ್ಷಗಳವರೆಗೂ ಉಚಿತ ಪಡಿತರ ನೀಡಲಿದ್ದೇವೆ ಎಂದರು.

ಈ ಭಾಗದ ಜನತೆ ಹೊಸ ಬಸ್ ನಿಲ್ದಾಣ ನಿರ್ಮಾಣ ಮಾಡುವಂತೆ ಬೇಡಿಕೆ ಇಟ್ಟಿದ್ದರು. ಆಂಜನೇಯ ನಗರದ ನಿವಾಸಿಗಳಿಗೆ ಉತ್ತಮ ಸೇವೆ ನೀಡುವ ಉದ್ದೇಶದಿಂದ ಈ ಬಸ್ ನಿಲ್ದಾಣ ನಿರ್ಮಿಸಲಾಗುತ್ತಿದೆ. ಈ ಭಾಗದ ಜನ ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಅನೀಲ ಬೆನಕೆ, ನಗರ ಸೇವಕರಾದ ರಾಜಶೇಖರ ಡೋಣಿ, ಮುರಘೇಂದ್ರಗೌಡ ಪಾಟೀಲ, ಭಾರತಿ ಮಹಿಳಾ ಅಭಿವೃದ್ಧಿ ಸಂಘ ರಾಜಶ್ರೀ ಅಕ್ಕಿ. ಉಪಾಧ್ಯಕ್ಷರು ವಿದ್ಯಾ ವಡವಡೆ, ಕಾರ್ಯದರ್ಶಿ ಘಡಿಪಾಟೀಲ್ ಸೇರಿದಂತೆ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ತಾಳಿಕೋಟೆ: ನರ್ಸಿಂಗ್ ಕಾಲೇಜ್ ವಿದ್ಯಾರ್ಥಿಗಳ ಉತ್ತಮ ಸಾಧನೆ



**ತಾಳಿಕೋಟೆ :** ಪಟ್ಟಣದ ಶ್ರೀ ಭಾಗ್ಯವಂತಿ ಶಿಕ್ಷಣ ಸಂಸ್ಥೆಯಡಿ ನಡೆಯುತ್ತಿರುವ ಶ್ರೀ ಭಾಗ್ಯವಂತಿ ಕಾಲೇಜ್ ಆಫ್ ನರ್ಸಿಂಗ್ ಕಾಲೇಜಿನ ದ್ವಿತೀಯ ವರ್ಷದ ಬಿ.ಎಸ್ಸಿ ನರ್ಸಿಂಗ್‌ದಲ್ಲಿ ವಿಧ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ಸಂಸ್ಥೆಗೆ ಕೀರ್ತಿ ತಂದಿದ್ದು ಕಾಲೇಜಿನ ಫಲಿತಾಂಶವು ಶೇ.100ರಷ್ಟಾಗಿದೆ.

ಪರಿಕ್ಷೆಗೆಕುಳಿತವರಲ್ಲಿ15ಜನವಿಧ್ಯಾರ್ಥಿಗಳು ಡಿಸ್ಟಿಂಗ್‌ಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದು 9 ಜನ ವಿಧ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ವಿಧ್ಯಾರ್ಥಿಗಳಾದ ರಾಧಿಕಾ ಮಲ್ಲಿಕಾರ್ಜುನ ಶೇ.79.85 ಪ್ರಥಮ, ರವಿಕಾಂತ ಹೊನ್ನಕೊರೆ ಶೇ.79.71 ದ್ವಿತೀಯ, ಶಂಕರಗೌಡ ಬಿರಾದಾರ ಶೇ.79.14 ತೃತೀಯ ಸ್ಥಾನ ಪಡೆದಿದ್ದಾರೆ. ಇವರನ್ನೊಳಗೊಂಡು ನಿಮಿಷಾ ಬಸವರಾಜ ಶೇ.78.42, ರೇಣುಕಾ ಗುಂಡಕನಾಳ ಶೇ.77.85, ಮಾಲನ ಶಹಾಪೂರ ಶೇ.77.28, ಭೋರಮ್ಮ ಮೂಕೀಹಾಳ ಶೇ.76.42, ಸಂಗೀತಾ ಶೇ.76.14, ಗೌರಮ್ಮ ಶೇ.75.85, ಪ್ರಜಾ ಅಗಸಬಾಳ ಶೇ.75.85, ಸುಮಂಗಲಾ 75.85, ಸಿದ್ದು ಕುಂಭಾರ ಶೇ.75.57, ಕುಮಾರಿ ಮಿಸ್ಟಾ ಶೇ.75.57, ವಿಧ್ಯಾಶ್ರೀ ಶೇ.76.28, ನಿಂಗಮ್ಮ ಶೇ.75 ರಷ್ಟು ಅಂಕ ಪಡೆದು ಡಿಸ್ಟಿಂಗ್‌ಕ್ಷನ್‌ನಲ್ಲಿ ಪಾಸಾಗಿದ್ದಾರೆ. ಕುಮಾರಬಡೇಸಾಬಶೇ.73.71,ಕಾಶಿನಾಥ ಶೇ.72.85, ಕಿರಣ ಬಡಿಗೇರ ಶೇ.72.42, ರೋಹಿತ್ ಶೇ.72.28, ನಿತೀನ ಚವ್ಹಾಣ ಶೇ.72.28, ಸ್ಯಾಮ್ಸನ್ ಸೋನಾವಣೆ ಶೇ.70.71, ಅಭಿಷೇಕ ಕರಾಳೆ ಶೇ. 68.85, ವಿಷ್ಣು ಭಗತ್ ಶೇ.68, ತ್ರಿಭುವನ್ ಶೇ.67 ಅಂಕ ಪಡೆದು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ದ್ವಿತೀಯ ಸೆಮಿಸ್ಟರ್ ಬಿಎಸ್ಸಿನರ್ಸಿಂಗ್‌ದಲ್ಲಿ ಉತ್ತಮ ಸಾಧನೆ

ಶ್ರೀ ಭಾಗ್ಯವಂತಿ ಕಾಲೇಜ್ ಆಫ್ ನರ್ಸಿಂಗ್ ಕಾಲೇಜಿನ ದ್ವಿತೀಯ ಸೆಮಿಸ್ಟರ್ ಬಿಎಸ್ಸಿ ನಸಿಂಗ್ ಪರಿಕ್ಷೆಯಲ್ಲಿ ವಿಧ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಈ ಪರಿಕ್ಷೆಯಲ್ಲಿಯೂ ಕಾಲೇಜಿಗೆ ಶೇ.100 ರಷ್ಟು ಫಲಿತಾಂಶ ಒದಗಿಬಂದಿದ್ದು ಪರಿಕ್ಷೆಗೆ ಕುಳಿತ 34 ವಿಧ್ಯಾರ್ಥಿಗಳು ಡಿಸ್ಟಿಂಗ್‌ಕ್ಷನಲ್ಲಿ ಪಾಸಾಗಿದ್ದಾರೆ.

ಅಕ್ಷತಾ ವಾಲೀಕರ ಶೇ.84.57 ಪ್ರಥಮ, ಗೌರಮ್ಮಪ್ರಜಾರಿಶೇ.84ದ್ವಿತೀಯ,ಶ್ರೀದೇವಿ ಶೇ.83.71 ತೃತೀಯ ಸ್ಥಾನ ಪಡೆದು–ಕೊಂಡಿದ್ದು ಇವರನ್ನೊಳಗೊಂಡು ಪಂಕಜಕುಮಾರ ಶೇ.83.14, ಮಿಸ್ಬಾ ಬೀಳಗಿ ಶೇ.82.85, ಭಾಗ್ಯಶ್ರೀ ಶೇ.82.57, ಪ್ರವೀಣಕುಮಾರಶೇ.79.17,ಸೋಮಯ್ಯ ಹಿರೇಮಠ ಶೇ.79.14, ಅರ್ಚನಾ ಕ್ಷತ್ರಿ ಶೇ.78, ನೇಹಾ ಬಿ. ಶೇ.78, ರಾಚೇಲ ಜಿ. ಶೇ.77.71, ಭವಾನಿ ಶೇ.77.48, ಶಿಲ್ಪಾ ಕೆ. ಶೇ.81.42, ನಿಂಗಮ್ಮ ಶೇ.77.42, ವಿಶಾಲ ಬಿಜಾಪೂರ ಶೇ.77.14, ತೇಜಸ್ ಶೇ.77.14, ಸೋನಮ್ ಲಾಮು ಶೇ.77.14, ಮೇಘನಾ 76.85, ಕನ್ನೂಮಾ ಶೇ.76.57, ಉಮ್ಮೇಹಬೀಬಾ ಎಸ್. ಶೇ.76.57, ಅಲೀಷಾ ಛತ್ರಿ ಶೇ.76.28, ಇಸ್ನೇಹಾ ತಿ. ಶೇ.75.71, ಕರೀನಾ ಶರ್ಮಾ ಶೇ.74.85, ಸ್ಮೃತಿ ಶೇ.74.57, ಸುಪ್ರೀತ್ ಶೇ.74, ಉಮ್ಮೇಹಬೀಬಾ ಬಿ. ಶೇ.74, ಸಿಪ್ಸನಾ ಶೇ.73.71, ಶರಣಮ್ಮ ಶೇ.73.14, ಉಮಾ ನಾಯಕ ಶೇ.73.14, ಯಮುನಾ ಶೇ.72.28, ಪಿ.ರಾಮಚಂದ್ರ ಶೇ.72, ದಾವಲಸಾಬ ಪಿ ಶೇ/71.42, ವಿಶ್ವ ಮೋಪಗಾರ ಶೇ.71.42, ಮಾಯಾವತಿ ಶೇ.69.14 ಅಂಕ ಪಡೆದು ಡಿಸ್ಟಿಂಗ್‌ಕ್ಷನಲ್ಲಿ ಪಾಸಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಆಯ್.ಬಿ.ತಳ್ಳೊಳ್ಳಿ, ಅಧ್ಯಕ್ಷರಾದ ಶ್ರೀಮತಿ ಸವೀತಾ ತಳ್ಳೊಳ್ಳಿ, ಪ್ರಾಚಾರ್ಯ ಅನೀಲ ಪತ್ರಿಮಠ, ಸಿಬ್ಬಂದಿಗಳು, ಶಿಕ್ಷಕವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

# ಭಗವಂತನ ಶ್ರೇಷ್ಠವಾದ ಭಕ್ತಿಗಿಂತ ಮಿಗಿಲಾದುದು ಯಾವುದು ಇಲ್ಲ



**ಬೀಳಗಿ :** ಭಗವಂತನಲ್ಲಿ ಅನುಪಮ, ಅಚಲವಾದ ಭಕ್ತಿ ಇರಬೇಕು. ಶ್ರೇಷ್ಠವಾದ ಭಕ್ತಿಗಿಂತ ಮಿಗಿಲಾದುದು ಯಾವುದು ಇಲ್ಲ. ಭಗವಂತನನ್ನು ಧ್ಯಾನಿಸಿ, ಪೂಜಿಸಿ ಮೋಕ್ಷ ಪಡೆಯುವುದು ಮನುಷ್ಯ ಕುಲ ಒಂದೇ ಎಂದು ತುಳಸಿಗೇರಿ ಮಹಾಮುನಿ ಆಶ್ರಮದ ರಾಮಾನಂದ ಸ್ವಾಮಿಗಳು ಹೇಳಿದರು.

ತಾಲೂಕಿನ ಅರಕೇರಿ ಗ್ರಾಮದಲ್ಲಿ ಬಿತ್ತದೆ ಬೆಳೆದ ಶರಣ ಶ್ರೇಷ್ಠ, ಕೃಷಿ ಕಾಯಕ ಯೋಗಿ ಶ್ರೀ ಬೊಮ್ಮಲಿಂಗೇಶ್ವರ ಮತ್ತು ಶ್ರೀ ಲಕ್ಕಮ್ಮದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ನೂತನ ದೇವಾಯಲಗಳ ಲೋಕಾರ್ಪಣೆ ಹಾಗೂ ಪ್ರಥಮ ಜಾತ್ರಾ ಮಹೋತ್ಸವದ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿ, ಮನುಷ್ಯ ಯಾವ ರೀತಿ ಬದುಕುವಂತೆ ಸಂಸ್ಕಾರ ಕೊಡುವುದೇ ಮಠ ಮಂದಿರಗಳ ಸ್ಥಾಪನೆಯ ಉದ್ದೇಶವಾಗಿದೆ ಎಂದು ಹೇಳಿದರು.

ನಂದಿಕುರಳಿ ಪಂಚಲಿಂಗೇಶ್ವರ ಮಠದ ವೀರಭದ್ರ ಸ್ವಾಮಿಗಳು ಮಾತನಾಡಿ, ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಡುವುದು ತಂದೆ–ತಾಯಿಗಳ ಕರ್ತವ್ಯ. ಬಾಯಿ ರುಚಿಗೆ ಕರಿದ, ಮೈದಾದಿಂದ ತಯಾರಿಸಿದಂತಹ ವಿಷಮ ಆಹಾರ ಸೇವನೆಯಿಂದ ಹತ್ತಾರು ಕಾಯಿಲೆಗಳು ಆವರಿಸಿಕೊಳ್ಳುತ್ತಿರುವುದ–ರಿಂದ ನಾವು ಸೇವಿಸುವ ಆಹಾರವೇ ಔಷಧವಾಗಬೇಕೆಂದು ಹೇಳಿದರು.

ಕೌದೇಶ್ವರ ಮಠದ ಮಾಧವಾನಂದ ಸ್ವಾಮಿಗಳು ಮಾತನಾಡಿ, ಸೃಷ್ಟಿಯೇ ಭಗವಂತನ ಸ್ವರೂಪ. ಭೂಮಿಯ ಮೇಲೆ 84 ಲಕ್ಷ ಜೀವರಾಶಿಗಳು ಬದುಕುತ್ತಿವೆ. ಅದರಲ್ಲಿ ಮನುಷ್ಯ ಜನ್ಮ ಶ್ರೇಷ್ಠ. ನಿಷ್ಕಾಮ ಭಕ್ತಿಯಿಂದ ಮೋಕ್ಷ ಪಡೆದು ಜನನ–ಮರಣಗಳಿಂದ ಬಿಡುಗಡೆ ಹೊಂದಬಹುದಾಗಿದೆ ಎಂದು ಹೇಳಿದರು.

ಮುರನಾಳ ಮಳೆಪ್ಪಯ್ಯ ಮಠದ ಮಳೆರಾಜೇಂದ್ರ ಸ್ವಾಮಿಗಳು ಮಾತನಾಡಿ, ಮೂರ್ತಿಗೆ ಪ್ರಾಣಪ್ರತಿಷ್ಠಾಪನೆ ಮಾಡಿದಾಗ ದಿನನಿತ್ಯ ಭಕ್ತಿಯಿಂದ ನಡೆದುಕೊಳ್ಳುವ ಭಕ್ತರ ಕೋರಿಕೆಗಳನ್ನು ಈಡೇರಿಸುವ ಶಕ್ತಿ ಬರುತ್ತದೆ. ಧರ್ಮ ಕಾರ್ಯಗಳಿಗೆ ಸಹಾಯ ಮಾಡಿದರೆ ಪುಣ್ಯ ಪ್ರಾಪ್ತವಾಗುತ್ತದೆ ಎಂದರು.

ಬಕ್ಕೇಶ್ವರ ಮಠದ ಬಕ್ಕಯ್ಯ ಸ್ವಾಮಿಗಳು ಮಾತನಾಡಿ, ಸಂಸ್ಕಾರ ಕೊಡಲು ಓರ್ವ ಸಮರ್ಥ ಸದ್ಗುರುವಿನ ಅವಶ್ಯಕತೆ ಇದೆ ಎಂದರು.

ಕಮತ್ನೂರು ಅಡವಿಸಿದ್ದೇಶ್ವರ ಮಠದ ಕೃಪಾನಂದನಾಥ ಸ್ವಾಮೀಜಿಯಿಂದ ಬ್ರಾಹ್ಮಿ ಮುಹೂರ್ತದಲ್ಲಿ ಮೂರ್ತಿ ಪ್ರತಿಷ್ಠಾಪನೆ, ಪ್ರಾಣ ಪ್ರತಿಷ್ಠಾಪನೆ, ರುದ್ರಾಭಿಷೇಕ, ಹೋಮ ಹವನಗಳು ಜರುಗಿದವು. ಶಿವರಾತ್ರಿ ಅಂಗವಾಗಿ ಅಹೋರಾತ್ರಿ ಶಿವನಾಮ ಸ್ಮರಣೆ ಜರುಗಿತು.

**ಶ್ರೀರಕ್ಷೆ :** ನೂತನ ದೇವಾಲಯ ನಿರ್ಮಿಸಲು ಭೂದಾನ (30 ಗುಂಟೆ) ಮಾಡಿದ ಸಂಗಪ್ಪ ಗುರಪ್ಪ ಬಳಿಗಾರ, ಪ್ರೇಮಾ ಸಂಗಪ್ಪ ಬಳಿಗಾರ ಕುಟುಂಬ ಹಾಗೂ ನಿಂಗಪ್ಪ ಗುರಪ್ಪ ಬಳಿಗಾರ ದಂಪತಿ, ಹನುಮಂತ ಗುರಪ್ಪ ಬಳಿಗಾರ ದಂಪತಿಗಳನ್ನು ಸನ್ಮಾನಿಸಿ, ಶ್ರೀರಕ್ಷೆ ನೀಡಲಾಯಿತು.

ಆಶ್ರಮದ ಪೀಠಾಧಿಕಾರಿ ಬ್ರಹ್ಮಲಿಂಗ ಸ್ವಾಮಿಗಳು ನೇತೃತ್ವ ವಹಿಸಿದ್ದರು. ಕುಸುಗಲ್‌ದ ರಾಮಾನಂದ ಭಾರತಿ ಸ್ವಾಮಿಗಳು, ಜೋಕಾನಟ್ಟಿಯ ಬಿಳಿಯಾನಸಿದ್ಧ ಸ್ವಾಮಿಗಳು, ಮುದ್ದಡಗದ ಸದ್ಯೋಜಾತ ರೇಣುಕ ಶಿವಾಚಾರ್ಯ ಸ್ವಾಮಿಗಳು, ಗೋಕಾಕದ ಶಂಕರಾನಂದ ಅವಧೂತ ಸ್ವಾಮಿಗಳು, ದುರ್ಗಾದೇವಿ ಅರ್ಚಕ ನಾನಪ್ಪ ಪೂಜಾರಿ, ಇಲಾಳದ ಗಣೇಶ ಹೊರಪೇಟೆ, ಜಮಖಂಡಿಯ ಬಸವರಾಜ ಕಾಜಗಾರ ಮತ್ತಿತರಿದ್ದರು.

# ಯುವತಿಗೆ ಕಿರುಕುಳ–ಮೂವರ ಬಂಧನ

ರಬಕವಿ–ಬನಹಟ್ಟಿ : ರಬಕವಿಯ ಬಸ್ ನಿಲ್ದಾಣದಲ್ಲಿ ತೇರದಾಳದ ಕಾಲೇಜಿನಲ್ಲಿ ಬಿಎಸ್ಸಿ ನರ್ಸಿಂಗ್ ವ್ಯಾಸಂಗ ಮಾಡುತ್ತಿರುವ ಮೂವರು ವಿದ್ಯಾರ್ಥಿನಿಯರಲ್ಲಿ ಓರ್ವ ಇಪ್ಪತ್ತು ವರ್ಷದ ಯುವತಿ ಮಹಾಲಿಂಗಪೂರಕ್ಕೆ ತೆರಳುವದು ದಿನನಿತ್ಯವಾಗಿತ್ತು. ಕಳೆದ ಮೂರ್ನಾಲ್ಕು ದಿನಗಳಿಂದ ಆರೋಪಿತರಾದ ಅನ್ವರ ಮಕಾನದಾರ, ಅಯಾನ್ ಪಾಟೀಲ, ಜಾವಿದ್ ನದಾಫ್ ಎಂಬ ಮೂವರೂ ದಿನಾಲು ಒಂದೇ ಬೈಕ್‌ನಲ್ಲಿ ಬರುತ್ತ ಯುವತಿಯರ ಬೆನ್ನತ್ತಿ ಅವರನ್ನು ಚುಡಾಯಿಸುವುದು ಮಾಡುತ್ತಿದ್ದರು. ಮಾರ್ಚ್ 6 ರಂದು ಸಂಜೆ 6–15 ರ ಸುಮಾರಿಗೆ ತೇರದಾಳದ ಕಾಲೇಜಿನಲ್ಲಿ ತಮ್ಮ ಅಧ್ಯಯನ ಮುಗಿಸಿಕೊಂಡು ಮಹಾಲಿಂಗಪೂರಕ್ಕೆ ತೆರಳುವ ಸಂದರ್ಭ ಮತ್ತೇ ಬೈಕ್ವೊಂದರಲ್ಲಿ ಮೂವರೂ ಕಿಡಿಗೇಡಿಗಳು ಬಂದು ಯುವತಿಯರನ್ನು ಕೀಟಲೆ ಮಾಡುತ್ತ ಮೊಬೈಲ್ನಲ್ಲಿ ಫೋಟೊ ತೆಗೆಯುವುದು ಮಾಡುತ್ತ , ಯುವತಿಗೆ ಅವಳ ಮೊಬೈಲ್ ನಂಬರ್ ಕೊಡುವಂತೆ ಒತ್ತಾಯಿಸಿದ್ದಾರೆ. ಮೊಬೈಲ್ ನಂಬರ್ ನೀಡಲು ಯುವತಿ ನಿರಾಕರಿಸಿದಾಗ , ಯುವತಿಯ ಜೊತೆ ಜಗಳವಾಡಿ ಕೈಯಿಂದ ಕಪಾಳಕ್ಕೆ ಹೊಡೆದು ಭಾರೀ ವಳಪೆಟ್ಟುಪಡಿಸಿದ್ದಲ್ಲದೆ ಜಗಳ ಬಿಡಿಸಲು ಹೋದ ಇತರ ವಿದ್ಯಾರ್ಥಿಗಳಿಗೂ ಅವಾಚ್ಯವಾಗಿ ನಿಂದಿಸಿ ಕೊಲೆಯ ಹೆದ–ರಿಕೆ ಹಾಕಿದ್ದಾರೆಂದು, ತೇರದಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

**ಮೂವರ ಬಂಧನ :** ಘಟನೆಗೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಪೊಲೀಸರು ತಾಲೂಕಿನಾದ್ಯಂತ ಕಟ್ಟೆಚ್ಚರ ವಹಿಸಿದ್ದಾರೆ.

**ಹೈಅಲರ್ಟ್ :** ಇತ್ತ ಖಾಕಿ ಪಡೆ ರಬಕವಿ–ಬನಹಟ್ಟಿ ನಗರಾದ್ಯಂತ ಕಣ್ಗಾವಲು ಇಟ್ಟಿದ್ದು , ಅಲ್ಲಲ್ಲಿ ಇಂಥ ಪ್ರಕರಣಗಳಿಗೆ ಸಂಬಂಧಿಸಿದಂತೆ ಯುವಕರನ್ನು ತರಾಟೆಗೆ ತೆಗೆದುಕೊಳ್ಳುವ ದೃಶ್ಯ ಕಂಡು ಬರುತ್ತಿದೆ. ಸಂಜೆಯಾಗುತ್ತಿದ್ದಂತೆ ಅಲ್ಲಲ್ಲಿ ಪುಂಡರು ಗುಂಪುಗೂಡುತ್ತಿರುವುದನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಪೊಲೀಸ್ ರುಚಿ ತೋರಿಸುವಲ್ಲಿ ನಿರತರಾಗಿದ್ದಾರೆ.

**ಸಂಘಟನೆಗಳು ಸಜ್ಜು :** ಘಟನೆಗೆ ಸಂಬಂಧಿಸಿದಂತೆ ಹಿಂದೂ ಸಂಘಟನೆಗಳ ವಿವಿಧ ಮುಖಂಡರು ಆಂತರಿಕ ಸಭೆ ನಡೆಸುವಲ್ಲಿ ಕಾರಣವಾಗಿದ್ದು , ಘಟನೆಯ ಕುರಿತು ಆರೋಪಿತರಿಗೆ ಯಾವ ಶಿಕ್ಷೆಗೆ ಗುರಿಪಡಿಸಬೇಕೆಂಬ ಹೋರಾಟದ ಯೋಚನೆಯಲ್ಲಿದ್ದಾರೆ.

### ಕಸಾಪದಿಂದ ವಿಶ್ವ ಮಹಿಳಾ ದಿನಾಚರಣೆ

# 'ಮಹಿಳೆ ಅಬಲೆಯಲ್ಲ, ಸಬಲೆಯಾಗಿದ್ದಾಳೆ'



**ಬಾಗಲಕೋಟೆ :** ಇಂದಿನ ತಂತ್ರಜ್ಞಾನ ಯುಗದಲ್ಲಿ ಮಹಿಳೆಯು ಕಾಲಕ್ಕೆ ತಕ್ಕಂತೆ ಬದಲಾವಣೆಯಾಗಿ ವಿಫುಲವಾಗಿರುವ ಅವಕಾಶಗಳನ್ನು ಪಡೆಯುತ್ತಾ ಸಬಲೆಯಾಗಿ ಬೆಳೆಯುತ್ತಿದ್ದಾಳೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಹಾಗೂ ತಾಲೂಕಾ ಘಟಕದಿಂದ ಶುಕ್ರವಾರ ಸಂಜೆ ಕಸಾಪ ಭವನದಲ್ಲಿ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯು ಮುನ್ನುಗ್ಗುತ್ತಿದ್ದು, ಈ ಮೂಲಕ ನಾನು ಸಮರ್ಥವಾಗಿ ಇದ್ದೇನೆ ಎನ್ನುವ ಸಂದೇಶವನ್ನು ಸಮಾಜಕ್ಕೆ ಮಹಿಳೆಯರು ನೀಡುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಬಾಗಲಕೋಟೆ ಬಸವೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಪಾರ್ವತಿ ಎಸ್. ಆಲೂರ ಮಾತನಾಡಿ, ಮಹಿಳೆಯರು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆದು ಸದುಪಯೋಗ ಮಾಡಿಕೊಳ್ಳಬೇಕು. ಉತ್ತಮವಾದ ಸಮಾಜವನ್ನು ಕಟ್ಟಲು ಮಹಿಳೆಯ ಪಾತ್ರ ಅತ್ಯಂತ ಹಿರಿದಾಗಿದೆ ಎಂದು ಹೇಳಿದರು.

ಸಾಹಿತಿ ಪ್ರಿಯಾ ಕಟ್ಟಿ ಉಪನ್ಯಾಸ ನೀಡಿದರು. ವಿವಿಧ ಕ್ಷೇತ್ರದ ಸಾಧಕರಾದ ಕಾಶಿಬಾಯಿ ಬಿಲಕೇರಿ(ಕೃಷಿ), ಜ್ಯೋತಿ ಕಿರಣ ದಾಸ್ (ಮಹಿಳಾ ಸಂಘಟನೆ) ಹಾಗೂ ನಂದವ್ವ ಗದ್ದನಕೇರಿ(ಜಾನಪದ) ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಮಹಿಳಾಪರ ಚಿಂತಕಿ ಸುವರ್ಣ ಕೊಳಚಿ, ಕೆ.ಎಲ್.ಬಿಲಕೇರಿ, ಮಲ್ಲಿಕಾರ್ಜುನ ಹೆಗ್ಗಳಗಿ, ಆರ್.ಡಿ.ಹಳಂಗಳಿ, ಡಾ.ಎಸ್.ಬಿ.ಪಾಟೋಳ್ಳಿ ಸೇರಿದಂತೆ ಜಿಲ್ಲಾ ಹಾಗೂ ತಾಲೂಕಾ ಘಟಕಗಳ ಪದಾಧಿಕಾರಿಗಳು ಇದ್ದರು.

ತಾಲೂಕಾಧ್ಯಕ್ಷ ಪಾಂಡುರಂಗ ಸಣ್ಣಪ್ಪನವರ ಸ್ವಾಗತಿಸಿದರು. ಡಾ.ಉಮಾ ಅಕ್ಕಿ ಪರಿಚಯಿಸಿದರು. ಲಕ್ಕಮ್ಮದೇವಿ ಕೆಳಗಿನಗೌಡರ ನಿರೂಪಿಸಿದರು. ಎಸ್.ಎಸ್.ಗಾಣಗೇರ ವಂದಿಸಿದರು.

### ಮೆಡಿಕಲ್ ಕಾಲೇಜಿನಲ್ಲಿ ಸಂಗೀತ ಶಿವರಾತ್ರಿ

# ಭಕ್ತಿಭಾವಗಳ ಶಿವ ನೃತ್ಯ ತಾಂಡವ, ಶಿವಸ್ತುತಿ, ಶಿವಭಜನೆ




**ಬಾಗಲಕೋಟೆ :** ಸಂಗೀತ ಶಿವರಾತ್ರಿ ಭಕ್ತಿಭಾವಗಳ ಶಿವ ನೃತ್ಯ ತಾಂಡವ ಹಾಗೂ ಶಿವ ಭಜನೆ, ಶಿವಸ್ತುತಿಗಳ ಮೂಲಕ ಭಕ್ತಾಧಿಗಳನ್ನು ಅನುರಂಜಿಸಿದವು. ಸರ್ವಂ ಸಂಗೀತ ಶಿವಮಯವಾಗಿತ್ತು

ನಗರದ ಬಿ.ವಿ.ವಿ.ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯ ಆವರಣದಲ್ಲಿರುವ ಶಿವಾಲಯದಲ್ಲಿ ಶಿವರಾತ್ರಿ ನಿಮಿತ್ಯ ಶುಕ್ರವಾರ ಸಂಜೆ ಸಂಗೀತ ಶಿವರಾತ್ರಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಿತಾರ ನಿನಾದ, ವಚನ ಸಂಗೀತ, ಶಿವಸ್ತುತಿ, ಭಕ್ತಿ ಸಂಗೀತ, ಭಕ್ತಿ ಗೀತೆಗಳು ಮತ್ತು ನಾದ ವೈಭವವನ್ನು ಪ್ರಸ್ತುತ ಪಡಿಸಲಾಯಿತು.

ಕಾರ್ಯಕ್ರಮದ ಆರಂಭಕ್ಕೆ ಮೊದಲು ಮಾತನಾಡಿದ ಬಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ ಅವರು 'ದೇವರನ್ನು ಪ್ರಾರ್ಥಿಸುವ ವಿಧಾನಗಳಲ್ಲಿ ಸಂಗೀತಕ್ಕೆಪ್ರಥಮಆದ್ಯತೆಇದೆ.ಮಹಾಶಿವರಾತ್ರಿ ನಿಮಿತ್ಯ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಸಂಗೀತದ ವಿವಿಧ ಪ್ರಕಾರಗಳನ್ನು ಪ್ರಸ್ತುತಪಡಿಸಲಾಗುತ್ತಿದೆ. ನಗರದ ಸಾರ್ವಜನಿಕರು ಉತ್ಸಾಹದಿಂದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವರು. ಹಲವು ಗಂಟೆಗಳ ಕಾಲ ಭಕ್ತರು ಸಂಗೀತ ಸುಧೆಯಲ್ಲಿ ಮಿಂದೇಳಲಿರುವರು' ಎಂದು ನುಡಿದರು.

ಡಾ.ಕಾಶಿಲಿಂಗಮಠಅವರಸಿತಾರುನಾದದೊಂದಿಗೆ ಸಂಗೀತ ಶಿವರಾತ್ರಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಡಾ.ದೊಡ್ಡಮನಿ ಅವರ ವಚನ ಸಂಗೀತ, ಕುಮಾರಿ ಅದಿತಿ ಅವರ ಭಕ್ತಿಗೀತೆಗಳು, ಪರಿಮಳಾ ಅವಧಾನಿ ಅವರ ಭಕ್ತಿಕುಸುಮಾಂಜಲಿ ಕಾರ್ಯಕ್ರಮಕ್ಕೆ ಮೆರುಗು ನೀಡಿದವು. ಅರ್ಪಿತಾ ಮತ್ತು ಬಸವಜ್ಯೋತಿ ಶಿವಸ್ತುತಿಯನ್ನುಹಾಗೂ ಡಾ.ರಶ್ಮಿ ಚೌರ್ ಮತ್ತು ಡಾ.ಡಾ.ಹಿರಣ್ಮಯಿ ಬ್ರಿದ್ ಭರತನಾಟ್ಯವನ್ನು ಪ್ರಸ್ತುತ ಪಡಿಸಿದರು. ಪುಟ್ಟರಾಜ ಗವಾಯಿ ಸ್ಕೂಲ್ ಆಫ್ ಮ್ಯೂಜಿಕ್ ಅವರಿಂದ ಭಕ್ತಿಸಂಗೀತ ಸುಧೆ ಮತ್ತು ಇಂಜನಿಯ–ರಿಂಗ್ ಕಾಲೇಜಿನ ತಂಡದಿಂದ ಬಿ.ಇ.ಸಿ ಸ್ವರಗಳು ಮುಖ್ಯ ಆಕರ್ಷಣೆಯಾಗಿದ್ದವು. ಡಾ.ಸಿದ್ಧರಾಮಯ್ಯ ಮಠಪತಿ ಅವರ ನಾದ ವೈಭವದೊಂದಿಗೆ ಸಂಗೀತ ಶಿವರಾತ್ರಿ ಕಾರ್ಯಕ್ರಮ ಮುಕ್ತಾಯಗೊಂಡಿತು. ಡಾ. ಎಸ್.ಡಿ.ಕೆಂಗಲಗುತ್ತಿ ಕಾರ್ಯಕ್ರಮವನ್ನು ನಿರೂಪಿಸಿದರು. ಈಶ್ವರನ ದರ್ಶನಕ್ಕೆ ಮತ್ತು ಸಂಗೀತ ಶಿವರಾತ್ರಿ ಕಾರ್ಯಕ್ರಮಕ್ಕೆ ಆಗಮಿಸಿದ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು.

ಸಂಗೀತ ಶಿವರಾತ್ರಿ ಕಾರ್ಯಕ್ರಮದಲ್ಲಿ ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿಗಳಾದ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಅಶೋಕ ಸಜ್ಜನ (ಬೇವೂರ), ಬಿ.ವಿ.ವಿ ಸಂಘದ ಗೌರವಾನ್ವಿತ ಸದಸ್ಯರು, ಮೆಡಿಕಲ್ ಕಾಲೇಜ್ ಪ್ರಾಚಾರ್ಯ ಡಾ.ಅಶೋಕ ಮಲ್ಲಾಪೂರ, ವೈದ್ಯಕೀಯ ಅಧೀಕ್ಷಕಿ ಡಾ.ಭುವನೇಶ್ವರಿ ಯಳಮಲಿ, ಎಲ್ಲ ಆರೋಗ್ಯ ಮಹಾವಿದ್ಯಾಲಯಗಳ ಸಿಬ್ಬಂದಿ ಮತ್ತು ನಗರದ ಸಾರ್ವಜನಿಕರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳು ತಮ್ಮ ಶಕ್ತಿ ಸಾಮರ್ಥ್ಯವನ್ನು ಅರಿತುಕೊಳ್ಳಬೇಕು

**ರಬಕವಿ-ಬನಹಟ್ಟಿ :** ವಿದ್ಯಾರ್ಥಿಗಳು ತಮ್ಮ ಶಕ್ತಿ, ಸಾಮರ್ಥ್ಯ ಮತ್ತು ಬಲ ಹೀನತೆಗಳನ್ನು ಅರ್ಥ ಮಾಡಿಕೊಂಡು ದೊರೆಯುವ ಅವಕಾಶಗಳನ್ನು ಅತ್ಯುತ್ತಮವಾಗಿ ಬಳಸಿಕೊಂಡು ಸವಾಲುಗಳನ್ನು ಎದು-ರಿಸಿದರೆ ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಜಮಖಂಡಿ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸನ್ನವರ ತಿಳಿಸಿದರು.

ಗುರುವಾರ ಇಲ್ಲಿನ ಪದ್ಮಾವತಿ ಅಂತರರಾಷ್ಟ್ರೀಯ ಶಾಲೆಯಲ್ಲಿ ಪ್ರತಿಭಾನ್ವೇಷಣೆ ಮತ್ತು ಸಂವಾದ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ವಿತರಣೆ ಮಾಡಲಾಯಿತು. ವಿದ್ಯಾರ್ಥಿಗಳು ಮತ್ತೇ ಮತ್ತೇ ಓದುವ ರೂಢಿಯನ್ನು ಮಾಡಿಕೊಂಡು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಆಸಕ್ತಿ ಮತ್ತು ಜ್ಞಾನದಾಹದಿಂದ ಅಂತಿಮ ಹಂತದ ಪ್ರಯತ್ನ ಮಾಡಿದರೆ ಯಶಸ್ಸು ಸಾಧ್ಯ. ವಿದ್ಯಾರ್ಥಿಗಳು ಭಯ ಮುಕ್ತರಾಗಿ ಪರೀಕ್ಷೆಯನ್ನು ಎದುರಿಸಬೇಕು ಎಂದು ಬಸನ್ನವರ ಹೇಳಿದರು.




ಎಸ್. ಎಸ್. ಎಲ್. ಸಿ. ನೋಡಲ್ ಅಧಿಕಾರಿ ಶ್ರೀಶೈಲ ಬುರ್ಲಿ ಮಾತನಾಡಿ, ವಿದ್ಯಾರ್ಥಿಗಳು ನಿಗದಿತ ವೇಳಾಪಟ್ಟಿ, ಸಮರ್ಪಕ ಯೋಜನೆ ಮತ್ತು ಯೋಚನೆಗಳೊಂದಿಗೆ ಪರೀಕ್ಷೆ ತಯಾರಿ ಮಾಡಿಕೊಳ್ಳಬೇಕು. ಶ್ರಮಕ್ಕೆ ಉತ್ತಮ ಫಲವಿದೆ ಎಂದು ತಿಳಿಸಿದರು.

ಪ್ರತಿಭಾನ್ವೇಷಣೆ ಕಾರ್ಯಕ್ರಮದಲ್ಲಿ 250 ಮಕ್ಕಳು ಭಾಗವಹಿಸಿದ್ದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ವಿತರಣೆ ಮಾಡಲಾಯಿತು.

ಶ್ರೀಶೈಲ ಹಲ್ಯಾಳ, ಸುರೇಶ ತಾಣಸಿ, ಮುಕ್ತಾ ಎಸ್. ಕಾಡು ಕರಿಜಾಡರ ವಿವಿಧ ವಿಷಯಗಳ ಕುರಿತು ವಿದ್ಯಾರ್ಥಿಗಳ ಜೊತೆಗೆ ಸಂವಾದ ನಡೆಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಭಾರತಿ ತಾಳಿಕೋಟಿ, ಬಾಬಾಗೌಡ ಪಾಟೀಲ, ನರಸಿಂಹ ಕಲ್ಲೊಳ್ಳಿ, ರಾಜಕುಮಾರ ಬಾಬಣ್ಣನವರ, ಪ್ರಾಚಾರ್ಯ ಶ್ರೀಶೈಲ ಕುಂಬಾರ, ಸತೀಶ ಬೆಳಗಲಿ, ಪ್ರವೀಣ ಎರಂಡೋಲೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಂಭ್ರಮದ ಅಲ್ಲಮಪ್ರಭು ದೇವರ ಜಾತ್ರಾ ಮಹೋತ್ಸವ

**ರಬಕವಿ-ಬನಹಟ್ಟಿ :** ಬನಹಟ್ಟಿಯ ಹಳೆಯ ನೀರಿನ ಟ್ಯಾಂಕ್ ಹತ್ತಿರ ಇರುವ ಅಲ್ಲಮಪ್ರಭು ದೇವಸ್ಥಾನದ ಜಾತ್ರಾ ಮಹೋತ್ಸವವು ಸಕಲ ವಾದ್ಯ ಮೇಳದೊಂದಿಗೆ ಶುಕ್ರವಾರ ನಡೆಯಿತು.

ಜಾತ್ರಾ ಮಹೋತ್ಸವದ ನಿಮಿತ್ಯವಾಗಿ ಬೆಳಿಗ್ಗೆ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಯಿತು. ನಂತರ ಸ್ಥಳೀಯ ಕಾಡಸಿದ್ಧೇಶ್ವರ ದೇವಸ್ಥಾನದಿಂದ ಅಲ್ಲಮಪ್ರಭು ದೇವರ ಭಾವಚಿತ್ರದ ಮೆರವಣಿಗೆ ಮತ್ತು ಪಲ್ಲಕ್ಕಿ ಉತ್ಸವದ ಸೇವೆ ನಗರದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ಮೇಳದೊಂದಿಗೆ ನಡೆಯಿತು. ಮೆರವಣಿಗೆಯಲ್ಲಿ ಮಹಿಳೆಯರು ಆರತಿ ಮತ್ತು ಪೂರ್ಣಕುಂಭ ಹೊತ್ತು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಶ್ರೀಶೈಲ ಪಾನಶೆಟ್ಟಿ, ಗುರುಸಿದ್ದಪ್ಪ ಚನಾಳ, ಬಸವರಾಜ ಐಹೋಳಿ, ಕಾಡಪ್ಪ ಕಲಬುರಗಿ, ಮಹಾಲಿಂಗ ಚನಾಳ, ಶಿವನಿಂಗ ಶಿವಸಿಂಪಿ, ದೇವೇಂದ್ರಪ್ಪ ಚನಪನ್ನವರ, ಪ್ರಭು ಮುಂಡಗನೂರ, ಅಶೋಕ ಶಿರೂರ, ಚಂದ್ರಶೇಖರ ಸಾರವಾಡ, ಭೀಮಶಿ ಹೊರಗಿನಮನಿ, ರಾಜು ಸಾರವಾಡ, ಈಶ್ವರ ಇಟ್ನಾಳ, ಮಹಾಂತೇಶ ಶಲವಡಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.




**ಬೆಳಗಾವಿಯ ಹೋಟೇಲ್ ಸಂಕಮ ರೆಸಿಡೆನ್ಸಿಯಲ್ಲಿ ತೊಟಗಾರಿಕಾ ರೈತ ಮಹಿಳೆಯರಿಗಾಗಿ ಮಂಗಳವಾರ ಏರ್ಪಡಿಸಲಾಗಿದ್ದ ತೋಟಗಾರಿಕೆ ತರಬೇತಿ ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಜಿವಾಗ್ರೋ ಕಂಪನಿಯ ಚಿರಾಗ್ ಜೈನ್, ಸೂರ್ಯಂ ಚಪ್ಪರ್, ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್ ಮೊದಲಾದವರು ಭಾಗವಹಿಸಿದ್ದರು.**




# ಸರ್ವಧರ್ಮ ಸದ್ಭಾವನಾ ಸಮಾರಂಭ: ಭಾವೈಕ್ಯತಾ ಪ್ರಶಸ್ತಿ ಪ್ರದಾನ

**ವರದಿ : ಲಾಲಸಾಬ ಸವಾರಗೋಳ**

**ವಿಜಯಪುರ :** ಮೌಢ್ಯ, ಕಂದಾಚಾರಗಳನ್ನು ಹೊಡೆದೋಡಿಸಿ, ಸರ್ವರನ್ನು ಸಮಾನವಾಗಿ ಕಾಣುವುದೇ ಪ್ರತಿ ಧರ್ಮದ ನೈಜ ತತ್ವವಾಗಿದೆ ಎಂದು ಯರನಾಳ ವಿರಕ್ತಮಠದ ಗುರುಸಂಗನ ಬಸವ ಮಹಾಸ್ವಾಮಿಜಿಗಳು ಹೇಳಿದರು.

ಕೊಲ್ಹಾರ ಪಟ್ಟಣದಲ್ಲಿ ಗುರುವಾರ ಇಪ್ಪತ್ತನೇ ಶತಮಾನದ ಸೂಫಿ ಸಂತ ಗುರು ಅಲಹಾಜ್ ಶಾಹ ಮಹಮ್ಮದ್ ಅಬ್ದುಲ್ ಗಫಾರ್ ಖಾದ್ರಿ ಅವರ ಉರುಸಿನ ನಿಮಿತ್ಯ ಜರುಗಿದ ಸರ್ವಧರ್ಮ ಸದ್ಭಾವನಾ ಸಮಾರಂಭ ಹಾಗೂ ಭಾವೈಕ್ಯತಾ ಪ್ರಶಸ್ತಿ ಪ್ರದಾನ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕು ಸಾಗಿಸಬೇಕು. ರಾಜಕೀಯದ ಕುತಂತ್ರದಿಂದ ಪ್ರಸ್ತುತ ವಾತಾವರಣ ಜಟಿಲವಾಗುತ್ತಿದೆ. ಮುಗ್ಧ ಜನರು ಆಮಿಷಕ್ಕೆ ಬಲಿಯಾಗದೆ, ಒತ್ತಡಗಳಿಗೆ ಒಳಗಾಗದೇ ಪ್ರೇರಣಾದಾಯಕ ಬದುಕು ಸಾಗಿಸಬೇಕು ಎಂದು ಅವರು ಹೇಳಿದರು.

ಬೇಲೂರು ಹಾಗೂ ಕೊಲ್ಹಾರ ಹಿರೇಮಠದ ಪ್ರಭುಕುಮಾರ ಶಿವಾಚಾರ್ಯರು ಮಾತನಾಡುತ್ತಾ ಮನುಕುಲದ ಏಳ್ಗೆ ಬಯಸುವುದೇ ಸರ್ವಧರ್ಮಗಳ ಮೂಲ ಉದ್ದೇಶವಾಗಿದೆ. ಸಂತರ, ಶರಣರ, ಸೂಫಿಗಳ ನಾಡಾಗಿರುವ ಈ ಭಾರತ ದೇಶ ಸರ್ವರನ್ನು ತನ್ನ ಮಡಿಲಲ್ಲಿ ಇಟ್ಟುಕೊಂಡು ಸಲಹುತ್ತಿದೆ ಎಂದರು. ಪಟ್ಟಣದಲ್ಲಿ ಮುಸ್ಲಿಂ ಧರ್ಮಗುರುಗಳಾಗಿ ಪ್ರಸಿದ್ಧಿ ಪಡೆದಿರುವ ಡಾ. ಬಕ್ತೀಯಾರ್ ಖಾನ್ ಪಠಾಣ ಭಾವೈಕ್ಯತಾ ಸಮಾವೇಶ ಹಮ್ಮಿಕೊಂಡು ನಾಡಿಗೆ ಭಾವೈಕ್ಯತೆಯ ಸಂದೇಶ ಸಾರುತ್ತಿದ್ದಾರೆ. ಅವರ ಕಾರ್ಯ ಶ್ಲಾಘನೀಯ ಎಂದರು.



ಮಾಜಿ ಸಚಿವ ಎಸ್. ಕೆ. ಬೆಳ್ಳುಬ್ಬಿ ಮಾತನಾಡಿ ಸಾವಿರಾರು ವರ್ಷಗಳ ಇತಿಹಾಸ ಪರಂಪರೆ ಹೊಂದಿರುವ ಭಾರತ ದೇಶದಲ್ಲಿ ಸರ್ವ ಧರ್ಮಗಳು ಪರಸ್ಪರ ಸಹೋದರತ್ವದಿಂದ ಬೆಸೆದುಕೊಂಡಿವೆ. ಸಂತ ಶರಣ-ರ ಸೂಫಿಗಳ ಸಮಾಗಮವೇ ಈ ಭವ್ಯ ಭಾರತ. ಸರ್ವರು ದೇಶದ ಚರಿತ್ರೆಯನ್ನ, ಮಹತ್ವವನ್ನ ಅರಿಯಬೇಕಿದೆ. ದೇಶದ ವಿಷಯದಲ್ಲಿ ತಪ್ಪು ಯಾರೇ ಮಾಡಿರಲಿ ಅದನ್ನು ತೀಕ್ಷ್ಣವಾಗಿ ಖಂಡಿಸಬೇಕು ಎಂದರು.

ಅಮಾನತ್ ಬ್ಯಾಂಕಿನ ಅಧ್ಯಕ್ಷ ಸಲೀಂ ಅತ್ತಾರ ಮಾತನಾಡುತ್ತಾ ಪ್ರಸ್ತುತ ಭಾವೈಕ್ಯತೆಯ ಸಂದೇಶ ಸಾರುವುದು ಅತ್ಯಂತ ಅವಶ್ಯಕವಾಗಿದೆ ಎಂದರು.

ಭಾರತ ದೇಶ ಸರ್ವ ಧರ್ಮೀಯರನ್ನು ತನ್ನ ಮಡಿಲಲ್ಲಿಟ್ಟುಕೊಂಡು ತೂಗುತ್ತಿದೆ.

ಇದು ಸಂತರ ನಾಡು, ಶರಣ-ರ ನಾಡು, ಸೂಫಿಗಳ ನಾಡು. ನಾವೆಲ್ಲರೂ ಪರಸ್ಪರರು ಒಂದೇ ತಾಯಿಯ ಮಕ್ಕಳಂತೆ ಬದುಕಬೇಕಿದೆ ಎಂದು ಹೇಳಿದರು.

ಭಾವೈಕ್ಯತಾ ಪ್ರಶಸ್ತಿ: ಜಾನಪದ ವಿದ್ವಾಂಸ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶಂಭು ಬಳಿಗಾರ ಅನುಪಸ್ಥಿತಿಯಲ್ಲಿ ಅವರ ಧರ್ಮಪತ್ನಿ ಶ್ರೀಮತಿ ಪ್ರೇಮಾ ಶಂಭು ಬಳಿಗಾರ ಅವರಿಗೆ ಪ್ರಸಕ್ತ ವರ್ಷದ ಅಲಹಾಬಾದ್ ಮೌಲಾನಾ ಭಾವೈಕ್ಯತಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸಾನಿಧ್ಯ ವಹಿಸಿದ್ದ ನಿವೃತ್ತ ಪ್ರಾಂಶುಪಾಲರಾದ ಸಯ್ಯದ ಬಹಾವೊದ್ದಿನ ಸದರಕಾಜಿ, ಅಧ್ಯಕ್ಷತೆ ಅಲ್ಹಾಜ ಡಾ. ಬಖ್ತಿಯಾರಖಾನ ಕಾದ್ರಿ ಉತ್ತರಾಧಿಕಾರಿಗಳು ಖಾನಕಾಯೇ ಗಫ್ಫಾರಿಯಾ, ಮಾಜಿ ಸಚಿವ ಎಸ್. ಆರ್. ಪಾಟೀಲ್, ಮಾಜಿ ಸಚಿವ ಎಸ್. ಕೆ. ಬೆಳ್ಳುಬ್ಬಿ , ಸಂಶೋಧಕರಾದ ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ, ಉಸ್ಮಾನ್ ಪಟೇಲ್ ಖಾನ್, ಐ. ಎನ್. ತಹಸಿಲ್ದಾರ, ಸಿ. ಎಂ. ಗಣ-ಕುಮಾರ, ನಂದಬಸಪ್ಪ ಚೌಧರಿ, ಈರಣ್ಣಗೌಡ ಕೋಮಾರ, ಬಸವರಾಜ ಎಸ್. ಹಂಗರಗಿ, ಅಲ್ಹಾಜ ಕಾಶೀಮಸಾಬ ಗಿರಗಾಂವಿ, ಮಲ್ಲು ದೇಸಾಯಿ, ಅಲ್ಹಾಜ ಎಚ್. ಕೆ. ಚೌಧರಿ, ಎಮ್. ಎಚ್. ಕೂಡಗಿ, ಬಿ. ಡಿ. ಕಲಾದಗಿ, ಹಟೇಲಸಾಬ ಕಂಕರಪೀರ, ಈರಣ್ಣ ಔರಸಂಗ ಸಹಿತ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹಾಜಿ ಅಯ್ಯೂಬ್ ಖಾನ್ ಪಠಾಣ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪತ್ರಕರ್ತ ಪರಶುರಾಮ ಗಣಿ ನಿರೂಪಿಸಿದರು.

ಖುದಾದಖಾನ್ ಪಠಾಣ ಸ್ವಾಗತಿಸಿದರು.

# ಆನೆಗೊಂದಿ ಉತ್ಸವದಲ್ಲಿ ಈ ಬಾರಿ ವೈವಿಧ್ಯಮಯ ಕಾರ್ಯಕ್ರಮಕ್ಕೆ ಯೋಜನೆ: ಜನಾರ್ಧನ ರೆಡ್ಡಿ

**ಕೊಪ್ಪಳ :** ಆನೆಗೊಂದಿ ಉತ್ಸವವನ್ನು ಅರ್ಥಗರ್ಭಿತ ಹಾಗೂ ವಿಜೃಂಭಣೆಯಿಂದ ನಡೆಸಲು ನಾನಾ ವೈವಿಧ್ಯಮಯ ಕಾರ್ಯಕ್ರಮಕ್ಕೆ ಯೋಜಿಸಲಾಗಿದೆ ಎಂದು ಗಂಗಾವತಿ ಶಾಸಕರಾದ ಜಿ.ಜನಾರ್ಧನ ರೆಡ್ಡಿ ಅವರು ಹೇಳಿದರು. ಆನೆಗೊಂದಿ ಉತ್ಸವ-2024ರ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಗಣದಲ್ಲಿ ಮಾರ್ಚ್ 5ರಂದು ನಡೆದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಆನೆಗೊಂದಿ ಉತ್ಸವವನ್ನು ಮಾರ್ಚ್ 11 ಮತ್ತು 12ರಂದು ಎರಡು ದಿನಗಳ ಕಾಲ ಆನೆಗೊಂದಿ ಹೊರಭಾಗದ ತಳವಾರ ಘಟ್ಟದ ರಸ್ತೆಯಲ್ಲಿ ಉತ್ಸವದ ಮುಖ್ಯ ವೇದಿಕೆಯಲ್ಲಿ ಆಚರಿಸಲಾಗುವುದು. ಉತ್ಸವದ ಮುಖ್ಯ ವೇದಿಕೆಗೆ ಆನೆಗೊಂದಿ ಸಂಸ್ಥಾನದ ರಾಜ ವಂಶಸ್ಥರಾದ ಶ್ರೀರಂಗದೇವರಾಯಲು ಅವರ ಹೆಸರಿಡಲು ನಿರ್ಧರಿಸಲಾಗಿದೆ. ಹನುಮ ಜನ್ಮಸ್ಥಳವಾದ ಐತಿಹಾಸಿಕ ಅಂಜನಾದ್ರಿ ಬೆಟ್ಟ, ಕಿಷ್ಕಿಂದೆ, ಸುಗ್ರೀವ, ರಾಮಭಕ್ತೆ ಶಬರಿಯ ಹಾಗೂ ಐತಿಹಾಸಿಕ ತಾಣಗಳನ್ನು ಹೊಂದಿರುವ ಈ ಭಾಗದ ಸಂಸ್ಕೃತಿಯನ್ನು ಕಲಾವಿದರಿಂದ ನಾಟಕ ಮತ್ತು ನೃತ್ಯ ರೂಪಕಗಳೊಂದಿಗೆ ಅನಾವರಣಗೊಳಿಸಲಾಗುವುದು. ವಿಶೇಷವಾಗಿ ಶ್ರೀರಾಮ, ಸುಗ್ರೀವ, ಆಂಜನೇಯನ ದರ್ಶನ, ಶಬರಿ, ಪಂಪಾಂಬಿಕೆಯರ ಇತಿಹಾಸ, ವಾಲಿಯ ವಧೆ ಒಳಗೊಂಡಂತೆ ರಾಮಾಯಣ ಹಾಗೂ ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಸಾರಲು ಹೆಚ್ಚಿನ ಗಮನ ಹರಿಸಲಾಗುತ್ತಿದೆ ಎಂದರು.


ಆನೆಗೊಂದಿ ಉತ್ಸವವದ ಮೊದಲ ದಿನದ ಕಾರ್ಯಕ್ರಮದಲ್ಲಿ ಪ್ರಖ್ಯಾತ ಗಾಯಕರಾದ ಹಂಸಲೇಖ, ನಟ ದೃವ ಸರ್ಜಾ ಸೇರಿದಂತೆ ರಾಜ್ಯದ ಮತ್ತು ಸ್ಥಳೀಯ ಖ್ಯಾತ ಕಲಾವಿದರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಎರಡನೇ ದಿನ ನಟ ಶ್ರೀಮುರಳಿ, ಗಾಯಕ ಅರ್ಜುನ ಜನ್ಯಾ, ನಿರೂಪಕಿ ಅನುಶ್ರೀ ಸೇರಿದಂತೆ ಇತರ ಕಲಾವಿದರು ಹಾಗೂ ಕಲಾ ತಂಡಗಳಿಂದ ಸಂಗೀತ, ನೃತ್ಯ, ಭರತನಾಟ್ಯ ಒಳಗೊಂಡಂತೆ ವಿಭಿನ್ನ ರೀತಿಯ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಅದಲ್ಲದೇ ಉತ್ಸವ ಅಂಗವಾಗಿ ಕ್ರೀಡಾಕೂಟ, ವಸ್ತುಪ್ರದರ್ಶನ, ವಿಚಾರ ಸಂಕಿರಣ, ಕವಿಗೋಷ್ಠಿಗಳನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧ ವಂಟಗೊಡಿ, ಅಪರ ಜಿಲ್ಲಾಧಿಕಾಗಳಾದ ಸಾವಿತ್ರಿ ಬಿ ಕಡಿ, ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಮನೋನಿಯಾಮಕ ಮಹಾದೇವರು (ಮಹಾಶಿವರಾತ್ರಿ ಪರಮ ಮಂಗಳದಿನ)

ಮನಸ್ಸಿನ ಇಂದ್ರೀಯಗೆ ಮನೋನಿಯಾಮಕ ನಾಗಿರುವ ಮಹಾದೇವರು ಇಲ್ಲದಿದ್ದರೆ ನಾವೆಲ್ಲರೂ ಪಶುಗಳಂತೆ ಬೇವಿಸ ಬೇಕಾಗುತ್ತದೆ. ಮನಸ್ಸು ಎಂಬ ಇಂದ್ರೀಯವೇ. ಎಲ್ಲಾ ಚಟುವಟಿಕೆಗಳು ನಡೆಯುತ್ತವೆ. ಮಹಾದೇವರ ಪ್ರೇರಣೆಯಿಂದಲೇ ಮನಸ್ಸಿಗೆ ಮುಖಾಂತರ ಎಲ್ಲ ಕಾರ್ಯಗಳು ಜೀವನದಲ್ಲಿ ನಡೆಯುತ್ತೆವೆ.ಪ್ರತಿಯೊಬ್ಬ ಜೀವಗಳು ಜಾತಿ,ಮತ,ಪಂಥ ಬೇಧಗಳಿಲ್ಲದೇ ನಿತ್ಯ ನಿರಂತರ ಮಹಾದೇವರನ್ನು ಭಜಿಸಬೇಕು. ಸರ್ವೋತ್ತಮನ ಆಜ್ಞೆಯಂತೆ ರುದ್ರದೇವರು ನಾನಾರೂಪಗಳಿಂದ ಅವತರಿಸಿ ದುಷ್ಟರ ಸಂಹಾರ ಹಾಗೂ ಭಕ್ತರ ರಕ್ಷಣೆ ಮಾಡುವರೆಂಬ ಕಥೆಗಳು ಪುರಾಣ ಯುಕ್ತವಾಗಿವೆ.ಸಾಧಕರಿಗೆ ಸಾಧನೆ ಮಾಡಿ ಮುಕ್ತಿ ಪಡೆಯಲು ಮಹಾದೇವರನ್ನು ಹೃದಯಮಂಟಪದಲ್ಲಿ ಕೂಡಿಸಿಕೊಳ್ಳಲೇಬೇಕು ಮಹಾದೇವರ ಮಹಿಮೆ ಅಪಾರವಾದುದು. ಶ್ರೀಹರಿಯ ಪರಮಭಕ್ತ

ಮಹಾದೇವರ ಹರಿಪ್ರೇರಣೆಯಿಂದ ದುರ್ವಾಸರಾಗಿ ಅಶ್ವತ್ಥಾಮರಾಗಿ ಹಾಗೂ ಶುಕಾಚಾರ್ಯರಾಗಿ ಜಗದಗಲ ಸುಜನರಿಗೆ ಅಸಂಖ್ಯಾತ ಮಹಿಮೆಗಳನ್ನು ತೋರಿಸಿದ್ದಾರೆ. ಜಗತ್ತಿಗೆ ಕ್ಷೇಮವಾಗಲು ವಿಷವನ್ನೇ ಪಾನಮಾಡಿ 'ವಿಷಕಂಠ' ಅಥವಾ 'ನೀಲಕಂಠ' ಎಂದು ಪ್ರಖ್ಯಾತರಾದರು.



ಭಕ್ತರ ತಪಸ್ಸಿಗೆ ಮೆಚ್ಚಿ ಕ್ಷಣದಲ್ಲಿ ಅಭಯ ನೀಡುವ ಒಡೆಯ ಮಹಾದೇವರು.ಭಕ್ತ ವಾತ್ಸಲ್ಯಕ್ಕೆ ಹೆಸರುವಾಸಿ.ಗಂಗಾದೇವಿಯನ್ನು ತಲೆ ಮೇಲೆ ಇಟ್ಟು ಕೊಂಡು ಜಗವನ್ನೇ ರಕ್ಷಿಸಿದ ಮಹಾಮಂಗಳ ಮೂರ್ತಿ ಶಿವ-ಪಾರ್ವತಿಯರ ದಾಂಪತ್ಯ ಅನ್ಯೋನ್ಯ ಜಗಕ್ಕೆ ಮಾದರಿ ನಿತ್ಯ ನಾವೆಲ್ಲರೂ ಎದ್ದಾಕ್ಷಣ ಶಿವ-ಪಾರ್ವತಿಯರ ಪ್ರತಿಮೆ, ಪೋಟಫ ದರುಶನ ಮಾಡಿದರೆ ಪರಮ ಮಂಗಳ ಸೌಭಾಗ್ಯ ದೊರಕುವದು. ಕಂಕಣ ಭಾಗ್ಯಕ್ಕೆ ಹಾಗೂ ದಾಂಪತ್ಯ ಜೀವನದ ಸಮಸ್ಯೆಗಳಿಗೆ ಶಿವ-ಪಾರ್ವತಿಯರ ಉಪಾಸನೆ ಭಕ್ತಿಯಿಂದ ಮಾಡಬೇಕು.

ಪ್ರತಿ ಸೋಮವಾರ ಹಾಗೂ ಶ್ರಾವಣಸೋಮವಾರ ವಿಶೇಷವಾಗಿ ಮಹಾದೇವರನ್ನು ಉಪಾಸಿಸಿ ಇಷ್ಟಾರ್ಥಗಳನ್ನು ಪಡೆಯ ಬಹುದು ಇನ್ನು ಮಾಘಮಾಸ ಕೃಷ್ಣಪಕ್ಷ 'ಚತುರ್ದಶೀ' ಶಿವರಾತ್ರಿ ಎಂಬ ಹೆಸರಿನಿಂದ ಜಗದ ತುಂಬೆಲ್ಲಾ 'ಮಹಾಶಿವರಾತ್ರಿ' ಎಂದು ಎಲ್ಲರೂ ಆಚರಿಸುವ ಪರ್ವಕಾಲವಾಗಿದೆ.ಅಂದು ಶಿವಸೋತ್ರ ಶಿವಾರ್ಚನೆ, ಜಪ ಉಪವಾಸ ಜಾಗರಣೆ ಹಾಗೂ ಶಿವನಿಗೆ ಅಭಿಕ್ಷೇಕ ಮುಂಗಳಿಂದ ಪೂಜಿಸುವರು.ತ್ರಿಹಳ ಬಿಲ್ವಪತ್ರೆಗಳ ಪೂಜೆ-ಅರ್ಚಣೆ ವಿಶೇಷವಾಗಿದೆ.ರಾತ್ರಿಯಲ್ಲಾ ಸ್ಮರಣೆಯಿಂದ ಹಾಡುಗಳಿಂದ ಪೂಜಿಸಿ ಜಾಗರಣೆ ಮಾಡುವರು.ಶಿವರಾತ್ರಿ ಹಬ್ಬಕ್ಕೇ ಮಹತ್ವ ಬರಲು ಪೌರಾಣಿಕ ಕಥೆ-ಯುಂಟು ವಾರಣಾಸಿಯಲ್ಲಿ ಒಬ್ಬ ಬೇಡನು ದಾರಿತಪ್ಪಿ ಏಕಾಂಗಿಯಾಗಿ ಅಡವಿಮಲ್ಲಿ ಉಪವಾಸದಿಂದ ಬಿಲ್ವ ಪತ್ರೆ ವೃಕ್ಷದ ಕೆಳಗೆ ಕುಳಿತನು.ಆವೃಕ್ಷದ ಎದುರಿಗೆ "ಲಿಂಗ" ಎತ್ತು ಆ ಲಿಂಗಕ್ಕೆ ಒಂದೊಂದೇ ಬಿಲ್ವಪತ್ರೆ ಏರಿಸುತ್ತಾ ರಾತ್ರಿಯನ್ನು ಕಳೆದನು.ಬೆಳಕು ಮಾಡಿದಾಗ ಆವನಿಗೆ ಶಿವನೇ ಪ್ರತ್ಯಕ್ಷನಾಗಿ ಬೇಡಿದವರ ನೀಡಿದನು. ಈ ದಿನವೇ ಜಗತ್ತಿಗೆ ಮಹಾಶಿವರಾತ್ರಿ ಎಂದು ಪ್ರಸಿದ್ಧವಾಯಿತು. ಲಿಂಗರೂಪ ಮಹಾರುದ್ರ ದೇವರು ನಂಬಿದ ಭಕ್ತರನ್ನು ಕೈಬಿಡುವದಿಲ್ಲ ಆದುದರಿಂದ ಈ ಪರ್ವದಿನ ನಾವೆಲ್ಲರೂ ಶಕ್ತ್ಯಾನುಸಾರ ರುದ್ರ- ದೇವರನ್ನು ಪೂಜಿಸೋಣ.ಅವನ ಅನುಗ್ರಹ ಅನುದಿನ ಸರ್ವರಿಗೂ ದೊರಕಲಿ.

* * *

* ಗೀತಾ. ಸಂ. ಮಿರ್ಜಿ

# ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆಗೆ ಶಂಕು ಸ್ಥಾಪನೆ ಸುಳ್ಳು ಬಿಜೆಪಿಯವರ ಮನೆದೇವರು: ಸಿಎಂ ಸಿದ್ದು

**ಅಥಣಿ :** ರಾಜ್ಯದಲ್ಲಿ ನಾವು ಅಧಿಕಾರಕ್ಕೆ ಬಂದ ನಂತರ ಪಂಚ ಗ್ಯಾರಂಟಿಗಳನ್ನು ಅನುಷ್ಠಾನ ಗೊಳಿಸುವ ಮೂಲಕ ಅನೇಕ ವರ್ಷಗಳಿಂದ ನನೆಗುದಿಗೆಬಿದ್ದಿರುವ ನೀರಾವರಿ ಯೋಜನೆಗಳಿಗೆ ಅನುದಾನ ಒದಗಿಸುವ ಮೂಲಕ ನುಡಿದಂತೆ ನಡೆದು ಕೊಂಡಿದ್ದೇವೆ. 16 ಸಾವಿರ ಕೋಟಿ ಅನುದಾನ ಮೀಸಲಿಡುವ ಮೂಲಕ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದೀವಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅವರು ಅಥಣಿ ತಾಲೂಕಿನ ಕೊಟ್ಟಲಗಿ ಗ್ರಾಮದಲ್ಲಿ ಜಲಸಂಪನ್ಮೂಲ ಇಲಾಖೆಯ 1486.81 ಕೋಟಿ ರೂಪಾಯಿ ಅನುದಾನದ ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆಗೆ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿದರು. ಕೃಷ್ಣಾ ನದಿಯಿಂದ 3 ಟಿಎಂಸಿ ನೀರನ್ನು ಎತ್ತುವ ಮೂಲಕ ಈ ಭಾಗದ ಸು. 50 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕಲಿದೆ. 12 ಹಳ್ಳಿಗಳ ರೈತರಿಗೆ ಇದರ ಸದುಪಯೋಗವಾಗಲಿದೆ. ಇದಲ್ಲದೆ 13 ಕೆರೆಗಳಿಗೆ ನೀರು ತುಂಬಿಸುವ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸಲಾಗುವುದು. ಈ ಯೋಜನೆಯಿಂದ ರೈತರಿಗೆ ಎರಡು ರೀತಿ ಲಾಭವಾಗಲಿದೆ. ಒಣ ಭೂಮಿ ಇರುವ ಜಮೀನುಗಳಿಗೆ ನೀರು ಒದಗುತ್ತದೆ ಎಂದರು.

ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದ ಸರ್ಕಾರ. ಬಿಜೆಪಿಯವರು ಕೇವಲ ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ದ್ವೇಷದ ಭಾವನೆಗಳನ್ನು ಬಿತ್ತಿ, ಸುಳ್ಳು ಆಶ್ವಾಸನೆಗಳನ್ನು ನೀಡುತ್ತಾರೆ. ಸುಳ್ಳೇ ಬಿಜೆಪಿಯವರ ಮನೆಯ ದೇವರಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿಯವರನ್ನು ಕುದರು.

ಉಪಮುಖ್ಯಮಂತ್ರಿ, ಬೃಹತ್ ನೀರಾವರಿ ಸಚಿವ ಡಿ.ಕೆ ಶಿವಕುಮಾರ ಮಾತನಾಡಿ ಕಮಲ ಕೆಸ-ರಿನಲ್ಲಿದ್ದರೆ ಚಂದ, ತೆನೆಯು ಹೊಲದಲ್ಲಿದ್ದರೆ ಚಂದ, ಕೈ( ಕಾಂಗ್ರೆಸ್) ದಾನ ಧರ್ಮಕ್ಕಾಗಿ ಅಧಿಕಾರದಲ್ಲಿದ್ದರೆ ಚಂದವೋ ಚಂದ ಎಂಬ ನಾಣ್ನುಡಿಯಂತೆ ರಾಜ್ಯದ ಮತದಾರರು ಸ್ಪಷ್ಟ ಬಹುಮತ ನೀಡುವ ಮೂಲಕ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ಸದಾ ಸುಳ್ಳು ಭರವಸೆಗಳನ್ನ ನೀಡುವ ಬಿಜೆಪಿ ಆಪರೇಷನ್ ಕಮಲದ ಮೂಲಕ ಅಧಿಕಾರ ನಡೆಸಿರುವುದನ್ನು ಮತದಾರರು ತಿರಸ್ಕ-ರಿಸಿದ್ದಾರೆಂದು ಹೇಳಿದರು. ಬೃಹತ್ ಕೈಗಾರಿಕೆ ಸಚಿವ ಎಂ ಬಿ ಪಾಟೀಲ ಮಾತನಾಡಿ ಮಾಜಿ ಡಿಸಿಎಂ ಶಾಸಕ ಲಕ್ಷ್ಮಣ ಸವದಿ ಅವರು ಬಿಜೆಪಿಯನ್ನು ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುವಾಗ ಯಾವುದೇ ಮಂತ್ರಿ ಸ್ಥಾನಕ್ಕೆ ಬೇಡಿಕೆ ಇಡದೆ ಅಥಣಿ ಮತಕ್ಷೇತ್ರದ ಅಭಿವೃದ್ಧಿಗಾಗಿ ಅನುದಾನ ಒದಗಿಸುವ ಮೂಲಕ ಕ್ಷೇತ್ರದ ಮತದಾರರ ಋಣ ತೀರಿಸಲು ಸಹಕರಿಸುವಂತೆ ಕೇಳಿದ್ದರು. ಅವರು ಜನಪರ ಕಾಳಜಿಯುಳ್ಳ ರಾಜಕಾರಣಿಯಾಗಿದ್ದಾರೆ. ಪಕ್ಕದ ಕ್ಷೇತ್ರದಲ್ಲಿ ನಾನು ಮಾಡಿರುವ ನೀರಾವರಿ ಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ಈ ಮತಕ್ಷೇತ್ರದಲ್ಲಿಯೂ ಕೂಡ ಒಣ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಹಗಲು ಶ್ರಮಿಸುತ್ತಿದ್ದಾರೆ. ಅವರ ಬೇಡಿಕೆಗೆ ತಕ್ಕಂತೆ ಇಂದು ನೀರಾವರಿ ಸಚಿವರು ಮತ್ತು ಮುಖ್ಯಮಂತ್ರಿಗಳು 1486 ಕೋಟಿ ರೂಪಾಯಿ ಅನುದಾನ ನೀಡಿದ್ದಾರೆಎಂದರು.




ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ, ಹಾರಾಷ್ಟ್ರದ ಮಾಜಿ ಶಾಸಕ ವಿಶ್ವಜಿತ್ ಕದಂ ಮಾತನಾಡಿದರು.ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಡಿಸಿಎಂ, ಶಾಸಕ ಲಕ್ಷ್ಮಣ ಸವದಿ ಮಾತನಾಡಿ ಅಮ್ಮಾಜೇಶ್ವರಿ ಏತ ನೀರಾವರಿ ಯೋಜನೆ ಅನುಷ್ಠಾನಗೊಳ್ಳುವ ಮೂಲಕ ಅಥಣಿ ತಾಲೂಕಿನಲ್ಲಿ ಶೇ.95ರಷ್ಟು ರೈತರ ಜಮೀನುಗಳು ನೀರಾವರಿ ಸೌಲಭ್ಯ ಹೊಂದಲಿವೆ. ಮುಂಬರುವ ದಿನಗಳಲ್ಲಿ ಸರ್ಕಾರ ಕೃಷ್ಣಾ ನದಿ ತೀರದ ಸವಳು ಜವಳು ಸಮಸ್ಯೆ ನಿವಾರಣೆಗೆ ಶಾಶ್ವತ ಪರಿಹಾರ, ಮತ್ತು ರೈತರ ಮಕ್ಕಳಿಗೆ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಕೃಷಿ ಮಹಾವಿದ್ಯಾಲಯವನ್ನು ಮಂಜೂರು ಮಾಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ಅಬಕಾರಿ ಸಚಿವ ಆರ್ ಬಿ ತಿಮ್ಮಾಪುರ, ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ, ಜತ್ತ ಶಾಸಕ ವಿಕ್ರಮ ಸಾವಂತ, ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ, ವಿಧಾನಪರಿಷತ್ ಸದಸ್ಯ ಚನ್ನರಾಜ ಹಟ್ಟಿಹಳಿ, ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್, ಆನಂದ ನ್ಯಾಮಗೌಡ, ವೀರ ಕುಮಾರ ಪಾಟೀಲ್, ಕಾಕಾಸಾಯಿ ಪಾಟೀಲ, ಶ್ಯಾಮ ಘಾಟಗೆ, ಲಕ್ಷ್ಮಣ ಚಿಂಗಳೆ, ಗ್ರಾಮ ಪಂಚಾಯಿತಿ ಅಧ್ಯಕ್ಷ ನಿಲುವ ತೇಲಿ, ಜಿಲ್ಲಾಧಿಕಾರಿ ನಿತೀಶ್ ಪಾಟೀಲ, ಜಿ.ಪಂ ಕಾರ್ಯದರ್ಶಿ ರಾಹುಲ್ ಸಿಂಧೆ, ಕರ್ನಾಟಕ ನೀರಾವರಿ ನಿಗಮದ ರಾಕೇಶ್ ಸಿಂಗ್, ಕೃಷ್ಣಮೂರ್ತಿ ಕುಲಕರ್ಣಿ, ರಾಜೇಶ್ ಅಮೀನಭಾವಿ, ಬಿ ಆರ್ ರಾಠೋಡ, ಪ್ರವೀಣ ಹುಣಸಿಕಟ್ಟಿ, ವೀರಣ್ಣ ವಾಲಿ, ತಹಸೀಲ್ದಾರ ವಾಣಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗಡಿ ಗ್ರಾಮಸ್ಥರಿಂದ ಮನವಿ

ಗಡಿನಾಡು ಕೊಟ್ಟಲಗಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಏತ ನೀರಾವರಿ ಯೋಜನೆಯ ಶಂಕುಸ್ಥಾಪನೆ ಸಮಾರಂಭಕ್ಕೆ ಮಹಾರಾಷ್ಟ್ರದ ಜತ್ತ ತಾಲೂಕಿನ ನೂರಾರು ಕನ್ನಡಿಗರು ನಾಮಫಲಕಗಳನ್ನ ಹಿಡಿದುಕೊಂಡು ಸಮಾರಂಭದಲ್ಲಿ ಭಾಗವಹಿಸಿದ್ದು ಆಕರ್ಷಣೀಯವಾಗಿತ್ತು. ಗಡಿಭಾಗದ ಅನೇಕ ಹಳ್ಳಿಗಳು ನೀರಾವರಿ ಸೌಲಭ್ಯ,ರಸ್ತೆ ಸುಧಾರಣೆ, ಕನ್ನಡ ಶಾಲೆಗಳ ಸುಧಾರಣೆ, ಕುಡಿಯುವ ನೀರು ಸೇರಿದಂತೆ ಅನೇಕ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ ನಮ್ಮನ್ನ ಕರ್ನಾಟಕ ರಾಜ್ಯಕ್ಕೆ ಸೇರಿಸಿಕೊಳ್ಳಬೇಕು ಎಂದು ಘೋಷಣೆಗಳನ್ನು ಕೂಗುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನ ಸೆಳೆದರು.

# ಲಕ್ಷ್ಮೀಬಾಯಿ ನಿಡಸೋಸಿ ನಿಧನ



**ಮೂಡಲಗಿ :** ಸ್ಥಳೀಯ ಲಕ್ಷ್ಮೀನಗರದ ಲಕ್ಷ್ಮೀಬಾಯಿ ಬಸವರಾಜ ನಿಡಸೋಸಿ (75) ಗುರುವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು ಇಬ್ಬರು ಪುತ್ರರು ಸಹಿತ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

## ಗ್ರಾಮೀಣ ಭಾಗದಲ್ಲಿ ಯುವ ಮಹಿಳಾ ಉದ್ಯಮಿ

# ನೀರು ಉದ್ಯಮದಲ್ಲಿ ಸಾಧಕಿಯಾದ ಶ್ರೀದೇವಿ ಹೊಸಪೇಟಿ

**ಹಾರೂಗೇರಿ :** ಮಹಿಳೆ ಎಂದರೆ ಹಾಗೆ! ಛಲಬಿಡದ ಚಿರತೆಯಂತೆ, ಗುರಿ ಹೊಂದಿದ ಗುರುವಂತೆ, ಮಮತೆಯ ಮಣ್ಣಿನಂತೆ, ಧರಣಿಯ ಹಸಿರಂತೆ ಸದಾ ಉಲ್ಲಾಸದ ಹಾದಿಯಲ್ಲಿ ಹೊಸ ಹೊಸ ವಿಚಾರಗಳೊಂದಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಮುನ್ನಡೆ ಸಾಧಿಸುವ ಹಂಬಲದಾಕೆ. ಇಂತಹ ಅಪರೂಪದ ಅತ್ಯಂತ ಕಡಿಮೆ ಅವಧಿಯಲ್ಲಿಯೇ ಸಿಂಚನ ಎಂಬ ನೀರಿನ ಘಟಕ ಸ್ಥಾಪನೆ ಮಾಡಿ ಹಲವಾರು ಜನರಿಗೆ ಉದ್ಯೋಗ ಕಲ್ಪಿಸಿ ತಾನೂ ಕೂಡ ಸಮಾಜದಲ್ಲಿ ಮುನ್ನಡೆಯನ್ನ ಸಾಧಿಸಬಹುದು ಎಂಬುದನ್ನು ತೋರಿಸಿದ್ದಾರೆ ಶ್ರೀದೇವಿ ಬಸವರಾಜ ಹೊಸಪೇಟಿ.ಗ್ರಾಮೀಣ ಭಾಗದ ಜನತೆಗೆ ಶುದ್ಧ ಕುಡಿಯುವ ನೀರು ಹಾಗೂ ಲವಣಂಶಯುಕ್ತ ನೀರು ಸಿಗಲಿ ಎಂಬ ಮಹದುದ್ದೇಶದಿಂದ 2019 ರಲ್ಲಿ ನೋಂದಣಿಯಾದ ಹಾಗೂ 2022 ರಲ್ಲಿ ಬೈಲೂರಿನ ಪೂಜ್ಯ ಶ್ರೀ ನಿಜಗುಣ ಪ್ರಭು ಸ್ವಾಮೀಜಿಗಳು ಹಾಗೂ ಶೇಗುಣಶಿಯ ಪೂಜ್ಯ ಶ್ರೀ ಮಹಾಂತ ಪ್ರಭು ಸ್ವಾಮೀ-ಜಿಗಳ ಅದರಂತೆ ಶರಣ ಶ್ರೀ ಐ ಆರ್ ಮಠಪತಿಯವರ ಅಮೃತ ಹಸ್ತದಿಂದ




ಅಧಿಕೃತವಾಗಿ ಕಾರ್ಯರಂಭಗೊಂಡ ಸಿಂಚನ ಫುಡ್ಸ್ ಅಂಡ್ ಬೆವರೇಜ್ ಪ್ರೈವೇಟ್ ಲಿಮಿಟೆಡ್, ಹಾರೂಗೇ-ರಿಯು, ಇಂದಿಗೆ 1 ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಇದೀಗ ಅಂದಾಜು 3.5 ಕೋಟಿ ರೂಪಾಯಿಯ ಬಂಡವಾಳದಿಂದ ಯಶಸ್ಸಿನ ಪಥದಲ್ಲಿರುವ ಈ ಸಂಸ್ಥೆಯು ಶ್ರೀಮತಿ ಶ್ರೀದೇವಿ ಬಸವರಾಜ ಹೊಸಪೇಟಿಯವರ ಮುಂದಾಳತ್ವದಲ್ಲಿ ಸಂಪೂರ್ಣ ಮಹಿಳಾ ಉದ್ದಿಮೆ ಘಟಕವಾಗಿ ಮುನ್ನಡೆಯನ್ನು ಸಾಧಿಸಿದೆ.

ಇದಕ್ಕೆ ಪೂರಕವಾಗಿ ಸಹಾಯ ಸಹಕಾರ ನೀಡಿದ ಮಾಜಿ ಶಾಸಕರಾದ ಪಿ ರಾಜೀವ್,ಅಥಣಿ ಶಾಸಕರಾದ ಲಕ್ಷ್ಮಣ ಸವದಿ,ಚಿದಾನಂದ ಸವದಿ ಮುಂತಾದ ಗಣ್ಯರು ಹರಸಿದ್ದಾರೆ.

**ಘಟಕದ ವಿಶೇಷತೆ :** ಅತ್ಯಾಧುನಿಕ ಯಂತ್ರೋಪಕರಣಗಳಿಂದ ಹಾಗೂ ಮುಂದುವರೆದ ತಂತ್ರಜ್ಞಾನದಿಂದ ನೀರನ್ನು ಶುದ್ಧೀಕರಣ ಗೊಳಿಸಿ ಸ್ವಯಂಚಾಲಿತ ಯಂತ್ರಗಳಿಂದ ಲವಣಾಂಶಗಳನ್ನು ಸೇರಿಸಿ, ಸಂಸ್ಕರಿಸಿ ಪರಿಶುದ್ಧವಾದ ನೀರನ್ನು 200ಎಂ ಎಲ್ ,500ಎಂ ಎಲ್ ,1 ಲೀಟರ್ ಹಾಗೂ 2,20 ಲೀಟರ್ ಬಾಟಲ್ ಗಳಲ್ಲಿ ಪ್ಯಾಕ್ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇನ್ನೊಂದು ವಿಶೇಷವೆಂದರೆ ಅಲ್ಕಾಲೈನ್ ವಾಟರ್ ತಯಾರಿಸುವ ಉತ್ತರಕರ್ನಾಟಕದ ಏಕೈಕ ನೀರಿನ ಘಟಕವೆಂದರೆ ಸಿಂಚನ ಎಂಬ ಪ್ರತೀತಿಯೂ ಇದಕ್ಕಿದೆ. ವಿ ಐ ಪಿ ಜನರು, ನಟ ನಟಿಯರು, ಕ್ರಿಕೆಟ್ ತಾರೆಗಳು ಬಳಸುವ ಈ ಅಲಕಲೈನ ನೀರಿನ ತಯಾರಿಕಾ ಘಟಕ ಬೆಂಗಳೂರು ಬಿಟ್ಟರೆ ಇದೇ ಹಾರೂಗೇ-ರಿಯಲ್ಲಿ ಮಾತ್ರವಿರುವಿದು ವಿಶೇಷ.

**ದುಡಿಯುವ ಸಿಬ್ಬಂದಿ :** ಈ ಸಿಂಚನ ನೀರಿನ ಘಟಕದಲ್ಲಿ 20 ಕ್ಕೂ ಅಧಿಕ ಸಿಬ್ಬಂದಿ ಇದ್ದು, 50% ರಷ್ಟು ಮಹಿಳಾ ಮಣಿಗಳೇ ಕಾರ್ಯ ನಿರ್ವಹಿಸುತ್ತಾರೆ.

ಇದಕ್ಕೆ ಪೂರಕ ಸಾರಥಿಯಾಗಿ ಶ್ರೀದೇವಿ ಹೊಸಪೇಟಿಯವರು ಮುನ್ನಡೆಯ ಹೆಜ್ಜೆ ಹಾಕುತ್ತಿದ್ದಾರೆ.ಸಣ್ಣ ಕೈಗಾರಿಕೆಯ ಮುಂಧೆಜ್ಜೆಯ ಪ್ರತೀಕವಾಗಿದೆ.




**ಸಂಸ್ಥಾಪಕರು :**
ಮೂಲತ: ವೈದ್ಯರಾದ ಡಾ.ಬಸವರಾಜ ಎಂ ಹೊಸಪೇಟಿಯವರು ಇದನ್ನು ಹುಟ್ಟು ಹಾಕಿದ್ದಾರೆ.ಹಿರಿಯ ನಿರ್ದೇಶಕರಾಗಿ ಶ್ರೀಮತಿ ಅಕ್ಕಾತಾಯಿ ಎಂ ಹೊಸಪೇಟಿಯವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀಮತಿ ಶ್ರೀದೇವಿ ಬಸವರಾಜ ಹೊಸಪೇಟಿಯವರಿದ್ದಾರೆ. ಸೋಮೇಶ್ವರ ಮಠಪತಿ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಜಾಣ ನಡೆಯ ವ್ಯವಹಾರಿಕ ವ್ಯವಹಾರ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿ ಇದೀಗ ಎಲ್ಲೆಡೆ ಅಂದರೆ 3 ರಾಜ್ಯಗಳಲ್ಲಿ ಸಿಂಚನ ತನ್ನ ನೀರಿನ್ನು ರುಚಿಸಿದೆ.

**ವಿಸ್ತಾರ :** ಕಳೆದ ಒಂದೇ ವರ್ಷದಲ್ಲಿ ಈ ಸಿಂಚನ ನೀರಿನ ಘಟಕ 3 ರಾಜ್ಯಗಳ 8 ಜಿಲ್ಲೆಗಳಲ್ಲಿ ತನ್ನ ವಿತರಣಾ ವ್ಯಾಪ್ತಿಯನ್ನು ಹಬ್ಬಿಸಿದೆ.ಅಲ್ಲದೆ ಪ್ರತಿದಿನ ಸುಮಾರು 50 ಸಾವಿರ ಲೀಟರ್ ನೀರನ್ನು ಶುದ್ಧಿಕರಿಸಿ ಮಾರಾಟ ಮಾಡುವ ಕಂಪನಿಯಾಗಿ ಮುನ್ನಡೆದಿದೆ.

**ವರದಿ : ಸುನೀಲ್ ಕಬ್ಬೂರ**

# ಜಿಲ್ಲಾಧಿಕಾರಿ ಟಿ.ಭೂಬಾಲನ್ ವಿಮಾನ ನಿಲ್ದಾಣ ಸ್ಥಳಕ್ಕೆ ಭೇಟಿ: ಪರಿಶೀಲನೆ

**ವಿಜಯಪುರ :** ವಿಜಯಪುರ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿಗಳ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿಗಳು, ಮಧಭಾವಿ, ಅಲಿಯಾಬಾದ ಹಾಗೂ ಬುರಣಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಅಗತ್ಯ ಕ್ರಮ ವಹಿಸುವುದಾಗಿ ಜಿಲ್ಲಾಧಿಕಾರಿ ಟಿ.ಬೂಬಾಲನ್ ಹೇಳಿದರು.

ಇಂದು ಬುರಣಾಪುರ ಹತ್ತಿರ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ ಈ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರೊಂದಿಗೆ ಪರಿಸರ ಅಭಿಯಾನ ಜಾಗೃತಿ ಕುರಿತು ಸಭೆಯ ಅಧ್ಯಕ್ಷತೆ ವಹಿಸಿ



ಅವರು ಮಾತನಾಡಿದರು.

ತಾವು ಮಂಡಿಸಿರುವ ತಮ್ಮ ಅನಿಸಿಕೆಗಳನ್ನು ದೃಡೀಕರಿಸಿ ಭಾರತದ ಸರ್ಕಾರದ ಅರಣ್ಯ ಮಂತ್ರಾಲಯಕ್ಕೆ ವರದಿ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಬೆಳಗಾವಿ ವಿಭಾಗದ ಹಿರಿಯ ಪರಿಸರ ಅಭಿಯಂತರರಾದ ಗೋಪಾಲಕೃಷ್ಣ ಸಣ್ಣತಂಗಿ, ಜಿಲ್ಲಾ ಪರಿಸರ ಅಧಿಕಾರಿಗಳಾಸ ಎಮ್.ಎ ಮಣಿಯಾರ, ಎಕ್ಸಿಕ್ಯೂಟಿವ ಇಂಜಿನಿಯರ್ ರಾಜು ಮಜುಮದಾರ, ಸಹಾಯರ ಅಭಿಯಂತರರಾದ ಎಮ್.ಎಮ್ ಪಾಟೀಲ, ರವಿ ಪಾಟೀಲ ಹಾಗೂ ಇತರರು ಉಪಸ್ಥಿತರಿದ್ದರು.

# ಕುಡಿಯುವ ನೀರಿಗೆ ಆದ್ಯತೆ ನೀಡಿ: ಜಿಲ್ಲಾಧಿಕಾರಿ ಟಿ.ಭೂಬಾಲನ್

**ವಿಜಯಪುರ :** ಜನ ಜಾನುವಾರಗಳಿಗೆ ಕುಡಿಯುವ ನೀರಿನ ತೊಂದ-ರೆಯುಂಟಾಗದಂತೆ ಅಧಿಕಾರಿಗಳು ಜಾಗೃತಿ ವಹಿಸಬೇಕು. ಈಗಾಗಲೇ ಜಿಲ್ಲೆಯ ಕೆರೆಗಳನ್ನು ತುಂಬಿಸಲು ಕಾಲುವೆ ಜಾಲದ ಮೂಲಕ ನೀರನ್ನು ಹರಿಸಲಾಗುತ್ತಿದ್ದು, ಕಟ್ಟುನಿಟ್ಟಾಗಿ ನಿಗಾವಹಿಸಿ ಕೆರೆಗಳನ್ನು ತುಂಬಿಸುವ ಮೂಲಕ ಕುಡಿಯುವ ನೀರಿನ ಸಮರ್ಪಕ ಬಳಕೆಗೆ ಎಲ್ಲಾ ಅಧಿಕಾರಿಗಳು ಕಾರ್ಯನ್ಮೋಖರಾಗಬೇಕು ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ಹೇಳಿದರು.

ಬುಧವಾರ ಜಿಲ್ಲಾಧಿಕಾರಿಗಳ ಕೆಸ್ವಾನ ಸಭಾಂಗಣದಲ್ಲಿ ನಡೆದ ಬರ ಪರಿಸ್ಥಿತಿ ನಿರ್ವಹಣೆ ಕುರಿತು ಜಿಲ್ಲಾ ವಿಪತ್ತು ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಜಿಲ್ಲೆಯಲ್ಲಿ ಈಗಾಗಲೇ ನೀರಿನ ಅವಶ್ಯಕತೆ ಇರುವ ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರನ್ನು ಒದಗಿಸಲಾಗುತ್ತಿದೆ.

ಶಾಲೆ, ಆಸ್ಪತ್ರೆ ಸೇರಿದಂತೆ ಅಗತ್ಯವಿರುವ ಕಡೆ ಆದ್ಯತೆ ಮೇಲೆ ನೀರು ಪೂರೈಸಲು ಕ್ರಮ ವಹಿಸುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕುಡಿಯುವ ನೀರಿಗಾಗಿ ಖಾಸಗಿ ಬೊರವೆಲ್‌ಗಳು, ತೆರೆದ ಬಾವಿಗಳನ್ನು ಗುರುತಿಸಿ ನೀರಿನ ಲಭ್ಯತೆ ಪರಿಶೀಲಿಸಬೇಕು. ಕಾಲಕಾಲಕ್ಕೆ ಟಾಸ್ಕಪೋರ್ಸ್ ಸಮಿತಿ ಸಭೆ ನಡೆಸಿ ಕುಡಿಯುವ ನೀರಿನ ತೊಂದ-



ರೆಯಾಗದಂತೆ ನೋಡಿಕೊಳ್ಳಬೇಕು. ಟ್ಯಾಂಕರ್ ನೀರು ಅವಶ್ಯಕತೆವಿದ್ದ ಕಡೆ ಟಾಸ್ಕಪೋರ್ಸ್ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ನೀರು ಒದಗಿಸಲು ಕ್ರಮ ವಹಿಸಬೇಕು. ಕಾಲುವೆಯ ಕೊನೆಯ ಭಾಗದವರೆಗೂ ನೀರು ತಲುಪುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು. ನೀರನ್ನು ಕುಡಿಯುವ ಉದ್ದೇಶಕ್ಕಾಗಿ ಸಂಗ್ರಹಿಸಿಡಲು ಎಲ್ಲ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆಯ ಬಸವರಾಜ ಕುಂಬಾರ, ಹೆಸ್ಕಾಂ ಅಧೀಕ್ಷಕ ಅಭಿಯಂತರ ಸಿದ್ದಪ್ಪ ಬಿಂಜಗೇರಿ, ಕೆಬಿಜೆಎನ್‌ಎಲ್ ಅಧಿಕಾರಿಗಳು ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ‘ಜೈ ಸಂವಿಧಾನ’ ಎಂಬ ಘೋಷವಾಕ್ಯ ಮೊಳಗಲಿ: ಶಿವಕುಮಾರ ಮಾವಲಿ

ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದೆಡೆಗೆ ಹೊರಳಿದ ಆಳುವ ವ್ಯವಸ್ಥೆಯ ಆಧಾರ ಸ್ತಂಭವೆಂದರೆ ಅದು ನಮ್ಮ ಸಂವಿಧಾನ. ಉಳ್ಳವರು, ಇಲ್ಲದವರು, ಆಳುವವರು, ಆಳಿಸಿಕೊಳ್ಳುವವರು ಎಲ್ಲರನ್ನೂ ಸಮಾನವಾಗಿ ಕಾಣಬೇಕೆಂಬುದು ಅದರ ಮೂಲ ಆಶಯ.

ಸೃಷ್ಟಿಯಲ್ಲಿನ ಭಿನ್ನತೆಗಳ ಹೊರತಾಗಿ ಮಾನವ ನಿರ್ಮಿತ ಭಿನ್ನತೆಗಳು ಸಮಾಜವನ್ನು ಒಡೆದು ಹಾಕಲು ಹವಣಿಸುತ್ತಿರುವ ಈ ಹೊತ್ತಿನಲ್ಲಿ, ಸಮತೆಯ ತತ್ವಗಳನ್ನು ಸಾರುವ, ಸರ್ವರ ಏಳಿಗೆಯನ್ನು ಬಯಸುವ, ದೇಶದ ಗೌರವಾನ್ವಿತ ಸಂವಿಧಾನದ ಬಗ್ಗೆ ಸಾಮಾನ್ಯ ಜನರಿಗೆ ಜಾಗೃತಿ ಮೂಡಿಸುವ ಸಲುವಾಗ ಹಮ್ಮಿಕೊಂಡಿರುವ ಸಂವಿಧಾನ ಜಾಗೃತಿ ಜಾಥಾವು ನಿಸ್ಸಂಶಯವಾಗಿ ಒಂದು ಮಹತ್ವದ ಕಾರ್ಯಕ್ರಮವಾಗಿದೆ. ಸರ್ಕಾರ ನಮ್ಮನ್ನು ಆಳುತ್ತಿರುವುದು ಯಾವ ಬುನಾದಿಯ ಮೇಲೆ ಎಂಬುದು ಅದರ ಪ್ರಜೆಗಳಿಗೆ ತಿಳಿದಿರಬೇಕಾದ್ದು ನ್ಯಾಯ ಸಮ್ಮತವಾದದ್ದು. ರಾಜಪ್ರಭುತ್ವದಲ್ಲಿ ಇದಕ್ಕೆ ಅವಕಾಶವೇ ಇರಲಿಲ್ಲ ಎಂಬುದು ಮನವರಿಕೆ ಯಾದಾಗಲಂತೂ ಇದು ಹೆಚ್ಚು ಪ್ರಸ್ತುತ ಅನಿಸುತ್ತದೆ.

ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಸಂವಿಧಾನದ ಮೂಲ ಗುರಿಗಳಾದ ಸಮಾನತೆ, ಭ್ರಾತೃತ್ವ, ಮತ ನಿರಪೇಕ್ಷತೆ, ಸಾರ್ವಭೌಮ, ಜಾತ್ಯಾತೀತತೆಯ ಅಂಶಗಳ ಬಗ್ಗೆ ಅರಿವು ಮೂಡಿಸುವಲ್ಲಿ ಈ ಸ್ತಬ್ಧಚಿತ್ರಗಳು ಮಹತ್ತರ ಪಾತ್ರ ವಹಿಸಬಲ್ಲವು. ಇದನ್ನು ಕೇವಲ ನೆಪಮಾತ್ರದ ಕಾರ್ಯಕ್ರಮವಾಗಿ ಮಾಡದೆ ಪ್ರತಿ ಹಳ್ಳಿ, ತಾಲ್ಲೂಕುಗಳಲ್ಲಿ ಜನರನ್ನು ಸೇರಿಸಿ ನಮ್ಮ ದೈನಂದಿನ ಜೀವನದಿಂದ ಹಿಡಿದು ವೃತ್ತಿ ಮತ್ತು ಸಾಂಸ್ಕೃತಿಕ ಧಾರ್ಮಿಕ ಜೀವನದಲ್ಲೂ ಸಂವಿಧಾನ ಎಂಥ ಪಾತ್ರವಹಿಸುತ್ತದೆ ಎಂಬುದನ್ನು ತಿಳಿಸಿಕೊಡುವ ಉಪನ್ಯಾಸಗಳನ್ನು ಏರ್ಪಡಿಸಬೇಕು. ಅವರದೇ ಊರಿನ ನಾಯಕರೋ ಅಥವಾ ಒಬ್ಬ ಭಾಷಣಕಾರರಿಂದ ಸರಳವಾಗಿ ಸಂವಿಧಾನ ನಮ್ಮೆಲ್ಲರಿಗೂ ಕೊಟ್ಟಿರುವ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸಬೇಕು.

ಬಹು ಸಂಸ್ಕೃತಿ ಮತ್ತು ಬಹುಧರ್ಮಗಳ ದೇಶವಾದ ಭಾರತಕ್ಕೆ ವೈವಿಧ್ಯತೆ ಎಷ್ಟು ಮುಖ್ಯ ಎಂಬುದನ್ನು ಸಾಮಾನ್ಯ ಜನರಿಗೆ ತಿಳಿಸಬೇಕಾದ ಅನಿವಾರ್ಯತೆ ಈಗಿದೆ.

ಸಂವಿಧಾನ ಎಂಬುದು ಕೇವಲ ಕಾನೂನುಗಳ ಕಟ್ಟಳೆಯಾಗಿರದೆ ಪ್ರತಿಯೊಬ್ಬ ಭಾರತೀಯನ ಜೀವನದ ಪುಸ್ತಕ ಎಂಬುದನ್ನು ಸಾರಿ ಹೇಳಲು ಈ ಜಾಥಾವನ್ನು ಸಶಕ್ತವಾಗಿ ಬಳಸಬೇಕಿದೆ. ನಿಜ ಅರ್ಥದಲ್ಲಿ ಅದರ ಪ್ರಕಾರ ಜೀವನ ನಡೆಸುವ ಅಗತ್ಯವನ್ನು ಜನರಿಗೆ ಮನಗಾಣಿಸಬೇಕಿದೆ. ಅಂದರೆ ಜನ ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆಯೂ ಅವರಿಗೆ ಈ ಕಾರ್ಯಕ್ರಮದಲ್ಲಿ ಎಚ್ಚರಿಸಬೇಕಿದೆ.

ಆರ್ಟಿಕಲ್ 17ರ ಪ್ರಕಾರ ಅಸ್ಪಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿದೆ ಎಂಬುದನ್ನು ನೆನಪಿಸಬೇಕಾಗಿದೆ. ಹಾಗೆಯೇ ಭಾರತೀಯ ಸಮಾಜದ ಮೂಲಮಂತ್ರವಾದ 'ವಿವಿಧತೆಯಲ್ಲಿ ಏಕತೆ' ಎಂಬುದರ ನೈಜ ಅರ್ಥವನ್ನು ಜನರಿಗೆ ಹೇಳಲು ಈ ಜಾಥಾ ಬಳಸಬಹುದು. ಬಹುತೇಕ ಸಾಮಾನ್ಯ ಜನರಲ್ಲಿ, ಸಂವಿಧಾನ ಕಾನೂನು ಬದ್ಧವಾಗಿ ನೀಡಿರುವ ಮೀಸಲಾತಿಯ ಬಗ್ಗೆ ತಪ್ಪು ಅಭಿಪ್ರಾಯಗಳಿವೆ. ಹಾಗಾಗಿ ಮೀಸಲಾತಿಯ ಅಗತ್ಯವನ್ನು ನಮ್ಮ ಸಾಮಾಜಿಕ ಇತಿಹಾಸದ ಮೂಲಕ ಅರಿಯುವಂತೆ ಮಾಡಲು ಇಂಥ ಕಾರ್ಯಕ್ರಮವೊಂದನ್ನು ಪರಿಣಾಮಕಾರಿಯಾಗಿ ಸರ್ಕಾರ ಬಳಸಿಕೊಳ್ಳಬೇಕು.

ಮರ್ಯಾದಾಗೇಡು ಹತ್ಯೆಯಂಥ ದುಷ್ಕೃತ್ಯಗಳು ಹಳ್ಳಿ ನಗರಗಳೆನ್ನದೆ ಹೆಚ್ಚಾಗುತ್ತಿರುವ ಈ ಹೊತ್ತಿನಲ್ಲಿ ಅವು ಕಾನೂನುಬಾಹಿರ ಎಂಬ ಸ್ಪಷ್ಟ ಸಂದೇಶವನ್ನು ಸಾರುವುದು ಈ ಜಾಥಾದ ಭಾಗವಾಗಲಿ. ಆಧುನಿಕತೆ,ವಿಜ್ಞಾನ-ತಂತ್ರಜ್ಞಾನ ಎಂದೆಲ್ಲ ಜಂಭ ಕೊಚ್ಚಿಕೊಳ್ಳುವ ಈ ಹೊತ್ತಿನಲ್ಲೂ ಜನರು ಅನೇಕ ಮೌಢ್ಯಗಳಿಗೆ ಬಲಿಯಾಗುತ್ತಿದ್ದಾರೆ. ಹಾಗಾಗಿ ಸಂವಿಧಾನದ ಆಶಯಗಳಲ್ಲೊಂದಾದ ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು ಎಷ್ಟು ಮುಖ್ಯ ಎಂದು ಸಾರುವಂತಾದರೆ, ಅಂಥ ಶ್ರದ್ಧೆಗಳಿಂದ ಜೀವನವನ್ನು ಯಾತನಾಮಯವಾಗಿ ಮಾಡಿಕೊಳ್ಳುತ್ತಿರುವವರಿಗೆ ದಾರಿ ತೋರಿದಂತಾಗುತ್ತದೆ.

ಅಂಬೇಡ್ಕರರ ಜೀವನ ಸಾಧನೆ ಜಗತ್ತಿಗೇ ಮಾದರಿಯಾದದ್ದು. ಸರಳವಾಗಿ ಅಂಬೇಡ್ಕರ್ ಜೀವನಗಾಥೆಯನ್ನು ವಿವರಿಸುವ ಕಾರ್ಯಕ್ರಮಗಳನ್ನು ಈ ವಿಶೇಷ ಸಂದರ್ಭದಲ್ಲಿ ಬಿತ್ತರಿಸುವುದು ಕೂಡ ಸೂಕ್ತವಾದುದು. ಬಹುಧರ್ಮಿಯರ ನಾಡಾದ ನಮ್ಮಲ್ಲಿ ಯಾವುದೇ ಒಂದು ರಾಷ್ಟ್ರಧರ್ಮವೆಂಬುದು ಇಲ್ಲ, ಒಂದು ಭಾಷೆ ಯಜಮಾನಿಕೆ ಮೆರೆಯುವಂತಿಲ್ಲ. ಇಲ್ಲಿ ಎಲ್ಲವಕ್ಕೂ ಸಮಾನ ಅವಕಾಶಗಳಿವೆ ಎಂಬ ಅಂಶವನ್ನು ಜನರಿಗೆ ಈ ಮೂಲಕ ತಲುಪಿಸಿದರೆ ಜಾತಿ,ಧರ್ಮ ಮತ್ತು ಭಾಷೆಯ ವಿಷಯಗಳಲ್ಲಿ ಅವರು ಉನ್ಮಾದದಿಂದ ವರ್ತಿಸುವುದನ್ನು ತಡೆಯಬಹುದು. ಒಬ್ಬೊಬ್ಬರು ಒಂದೊಂದು ಜಾತಿ, ಧರ್ಮ, ಭಾಷೆ ಮತ್ತು ಸಂಪ್ರದಾಯವನ್ನು ಅನುಸರಿಸುತ್ತೇವೆ. ಆದರೆ ಅವುಗಳನ್ನು ನಮ್ಮ ಮನೆಯೊಳಗಿಟ್ಟು ಸಾರ್ವಜನಿಕ ಬದುಕಿನಲ್ಲಿ ನಮ್ಮೆಲ್ಲರ ಖಣಚಣಣಣಜ ಃಠಠಇ ಸಂವಿಧಾನ ಮಾತ್ರ ಎಂಬುದನ್ನು ಜಾಥಾ ಹೋದ ಕಡೆಯಲ್ಲೆಲ್ಲ ಪುನರುಚ್ಛರಿಸಬೇಕು. ಮಂದಿರ, ಮಸೀದಿ, ಇಗರ್ಜಿಗಳನ್ನು ಸಹಮತದಿಂದ ಒಪ್ಪಿಕೊಳ್ಳುತ್ತಲೇ ಅವುಗಳನ್ನು ವೈಯಕ್ತಿಕವಾಗಿಟ್ಟುಕೊಂಡು ಮನೆಯಿಂದ ಹೊರಗೆ ಕಾಲಿಟ್ಟಾಗ ನಮ್ಮ ದಿಕ್ಸೂಚಿ ಸಂವಿಧಾನ ಎಂಬ ಅರಿವು ಪ್ರತಿಯೊಬ್ಬರಲ್ಲೂ ಮೂಡಲು ಈ ಕಾರ್ಯಕ್ರಮ ಸದ್ಬಳಕೆಯಾಗಲಿ. ಭಾರತೀಯರಾದ ನಾವು, ನಮ್ಮ ಸ್ಥಳೀಯ ಅಸ್ಮಿತೆಯನ್ನು ಉಳಿಸಿಕೊಂಡು ನಮಗೆ ನಾವೇ ಅರ್ಪಿಸಿಕೊಂಡಿರುವ ಸಂವಿಧಾನವನ್ನು ಜಾರಿಯಲ್ಲಿಡಲು ತೊಡಕಾಗುವ ಯಾರೇ ಆಗಲಿ ಅವರನ್ನು ಎದುರಿಸುವ ಶಕ್ತಿ ನಮಗೆ ಅದೇ ಸಂವಿಧಾನ ಕೊಟ್ಟಿರುವುದು ಕೂಡ ಸತ್ಯ. ನಮ್ಮ ಸಾಮಾಜಿಕ, ರಾಜಕೀಯ, ಧಾರ್ಮಿಕ , ಸಾಂಸ್ಕೃತಿಕ ಎಲ್ಲಾ ರೀತಿಯ ಬಿಕ್ಕಟ್ಟುಗಳು ಕೊನೆಗೆ ಬಗೆಹರಿಯುವುದು ಸಾಂವಿಧಾನಿಕವಾಗಿಯೇ ಆಗಿರುವುದರಿಂದ "ಜೈ ಸಂವಿಧಾನ" ಎನ್ನುವುದು ನಮ್ಮೆಲ್ಲರ ಘೋಷವಾಕ್ಯವಾಗಲಿ ಎಂದು ಈ ಜಾಥಾ ಹೋದಲ್ಲೆಲ್ಲ ಪ್ರಚುರಪಡಿಸುವುದು ಒಳಿತು. ಸಂವಿಧಾನದ ವಾತಾವರಣವನ್ನು ಹಾಳು ಮಾಡುವ ಜನರ ಕೆಟ್ಟ ಪ್ರಯತ್ನಗಳ ನಡುವೆ ಕತ್ತಲೆ ಮಧ್ಯೆ ದೀಪವಿಟ್ಟಂತೆ ಸರ್ಕಾರವು ಸಂವಿಧಾನದ ಕುರಿತು ಜಾಗೃತಿ ಮೂಡಿಸುತ್ತಿರುವುದು ಅತ್ಯಂತ ಆಶಾದಾಯಕವಾದ ಬೆಳವಣಿಗೆ ಆಗಿದೆ.

## ಡಾ. ಜೋರಾಪೂರವರ ‘ಕರ್ನಾಟಕದ ಇತಿಹಾಸ’ ಕೃತಿ ಲೋಕಾರ್ಪಣೆ

# ‘ಕರ್ನಾಟಕದ ಇತಿಹಾಸ’ ಕೃತಿಯು ಸಂಶೋಧಕರಿಗೆ ದಿಕ್ಸೂಚಿಯಾಗಿದೆ



**ಬೆಳಗಾವಿ :** ‘ಕರ್ನಾಟಕದ ಇತಿಹಾಸ-ಒಂದು ಇಣುಕು ನೋಟ’ ಕೃತಿಯು, ಕರ್ನಾಟಕ ಇತಿಹಾಸ ಕುರಿತು ಬರೆಯುವ ಸಂಶೋಧಕರಿಗೆ ಒಂದು ದಿಕ್ಸೂಚಿಯಾಗಿದೆ. ಕೃತಿಕಾರ ಡಾ. ಜೋರಾಪೂರ ಅವರಿಗೆ ದೇಶ ತಿರುಗುವುದರ ಜೊತೆಗೆ ಆ ಕುರಿತು ಅಭ್ಯಸಿಸಿ ಧಾಖಲಿಸುವ ಗುಣವಿದೆ ಎಂದು ಡಾ. ಸಿದ್ಧರಾಮ ಮಹಾಸ್ವಾಮಿಗಳು ಇಂದಿಲ್ಲಿ ಹೇಳಿದರು. ನಗರದ ನಾಡಹಬ್ಬ ಉತ್ಸವ ಸಮಿತಿ ಹಾಗೂ ಪ್ರಹ್ಲಾದ ಪ್ರಕಾಶನ ಇವರ ಸಂಯುಕ್ತ ಆಶ್ರಯದಲ್ಲಿ ನಿನ್ನೆ ದಿ. 3 ರವಿವಾರದಂದು ಮಧ್ಯಾಹ್ನ 3 ಗಂಟೆಗೆ ಶಿವಬಸವನಗರದಲ್ಲಿರುವ ಎಸ್. ಜಿ. ಬಾಳೇಕುಂದ್ರಿ ತಾಂತ್ರಿಕ ಮಹಾವಿದ್ಯಾಲಯ ಸಭಾಗೃಹದಲ್ಲಿ ಹಿರಿಯ ಲೇಖಕ ಡಾ. ಸಿ. ಕೆ. ಜೋರಾಪೂರ ರಚಿಸಿದ ‘ಕರ್ನಾಟಕದ ಇತಿಹಾಸ’ ಒಂದು ಇಣುಕುನೋಟ ಕೃತಿ ಲೋಕಾರ್ಪಣೆಗೊಂಡಿತು ಸಾನಿಧ್ಯವನ್ನು ವಹಿಸಿದ್ದ ಗದಗದ ತೋಂಟದಾರ್ಯ ಮಠದ ಡಾ. ಸಿದ್ಧರಾಮ ಮಹಾಸ್ವಾಮಿಗಳು ಮೇಲಿನಂತೆ ಅಭಿಪ್ರಾಯಪಟ್ಟರು.

ಮುಂದೆ ಮಾತನಾಡುತ್ತ ಸ್ವಾಮೀಜಿಯವರು ಕರ್ನಾಟಕದ ಸಾಂಸ್ಕೃತಿಕ ಇತಿಹಾಸ, ಕರ್ನಾಟಕದ ಭೌಗೋಳಿಕ ಇತಿಹಾಸ ಮುಂತಾದ ವಿಷಯಗಳ ಕುರಿತಾದ ಡಾ. ಸಿ. ಕೆ. ಜೋರಾಪೂರ ಅವರಿಂದ ಇನ್ನಷ್ಟು ಕೃತಿಗಳು ಹೊರಬರಲಿ ಓದುಗರಿಗೆ ಸಿಗುವಂತಾಗಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ನಿರ್ದೇಶಕರಾದ ಡಾ. ಸತೀಶ ಹೊಸಮನಿ, ನಾವು ಅಂತರ್ಜಾಲ ವಾಚನಾಲಯಗಳನ್ನು ಪಾರಂಭಿಸಿದ್ದು ಯಾವುದೇ ಶುಲ್ಕವಿಲ್ಲದೇ ಚಂದಾದಾರರಾಗಬಹುದು. ಈ ವಾಚನಾಲಯದಲ್ಲಿ ನಾಟಕ, ಕತೆ, ಕಾದಂಬರಿ, ಪ್ರಬಂಧ ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಮನೆಯಲ್ಲಿಯೇ ಕುಳಿತು ಓದಬಹುದಾಗಿದ್ದು ಎಲ್ಲರಿಗೂ ಸದಸ್ಯರಾಗಿ ಓದುವ ಸಂಸ್ಕೃತಿಯನ್ನು ಉಳಿಸಿ ಎಂದು ವಿನಂತಿಸಿಕೊಂಡರು.

ಕೃತಿಕಾರ ಡಾ. ಸಿ. ಕೆ. ಜೋರಾಪೂರ ಅವರು ಮಾತನಾಡಿ ಬೆಳಗಾವಿ ಸಾಹಿತ್ಯ ಕ್ಷೇತ್ರವು ಜಾತಿ, ಮತ ಗುಂಪುಗಾರಿಕೆಯಿಂದ ಕೂಡಿದ್ದು ಒಬ್ಬನು ಬೆಳೆದರೆ ಮತ್ತೊಬ್ಬನಿಗೆ ಸಹನೆಯಿಲ್ಲ. ಸರಿಯಾದ ವ್ಯಕ್ತಿಗೆ ಸಿಗದ ಪ್ರೋತ್ಸಾಹ, ಗೌರವ ಸಾಹಿತ್ಯಕ್ಷೇತ್ರದ ಹಿನ್ನೆಡೆಗೆ ಕಾರಣವಾಗಿದೆ ಎಂದು ವಿಷಾದ ವ್ಯಕ್ತ ಪಡಿಸಿದರು.

ಕೃತಿಯನ್ನು ಪರಿಚಯಿಸಿದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಮಹಾವಿದ್ಯಾಲಯದ ಉಪನ್ಯಾಸಕಿ ಡಾ. ರಾಧಾ ಬಿ. ಆರ್. ಅವರು ಮಾತನಾಡುತ್ತ ಇತಿಹಾಸಕ್ಕೆ ಒಂದು ಮಹಾಕಾವ್ಯಕ್ಕೆ ಇರುವಂತಹ ಮೌಲ್ಯವಿದೆ. ಇತಿಹಾಸವಿಲ್ಲದೇ ಆದರ್ಶವಿಲ್ಲ. ಇತಿಹಾಸ ಕೇವಲ ಸಂಶೋಧನೆಗೆ ಅಲ್ಲ ಮುಂದಿನ ಜೀವನದ ಮಾರ್ಗವಾಗಿದೆ. ಇತಿಹಾಸದಲ್ಲಿ ಪದವಿಯನ್ನು ಪಡೆದಿರುವ ಡಾ. ಸಿ. ಕೆ. ಜೋರಾಪುರ ಅವರು ಈ ಕೃತಿಯನ್ನು ಸಾಮಾನ್ಯ ಮನುಷ್ಯನಿಗೂ ತಿಳಿಯುವಂತೆ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ ಎಂದು ಹೇಳಿದರು.

ಡಾ, ಎಚ್. ಬಿ. ರಾಜಶೇಖರ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರಂಜಿಮಠದ ಪೂಜ್ಯರಾದ ಗುರುಸಿದ್ಧ ಮಹಾಸ್ವಾಮಿಗಳು, ಮಹಾಂತೇಶ ವಕ್ಕುಂದ ಮಾತನಾಡಿದರು. ಎಂ. ಬಿ. ಝಿರಲಿ, ಪ್ರೊ. ಎಂ. ಎಸ್. ಇಂಚಲ, ಕೇದಾರನಾಥ ಜೋರಾಪೂರ, ಪ್ರಹ್ಲಾದ ಜೋರಾಪುರ, ಆರ್.ಪಿ. ಪಾಟೀಲ, ಆನಂದ ಪುರಾಣಿಕ ಮುಂತಾದವರು ಉಪಸ್ಥಿತರಿದ್ದರು.

ಗ್ರಂಥದಾಸೋಹಿ ಆರ್. ಪಿ. ಪಾಟೀಲ ದಂಪತಿಗಳು, ಕನ್ನಡ ಹೋರಾಟಗಾರ ಬಾಸೂರು ತಿಪ್ಪೇಸ್ವಾಮಿ, ಕಿತ್ತೂರ ಸಂಸ್ಥಾನ ಸಂಬಂಧಿಗಳಾದ ಸೋಮಶೇಖರ ದೇಸಾಯಿ, ಅಶೋಕ ದೇಸಾಯಿ, ಶಂಕರಗೌಡ ಪಾಟೀಲ, ಬಾಬಾಗೌಡಾ ಪಾಟೀಲ, ಸಿದ್ಧನಗೌಡ ಪಾಟೀಲ, ಸೋಮನಗೌಡ ಪಾಟೀಲ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಶ್ರೀಮತಿ ಭುವನೇಶ್ವರಿ ವೆಂಕಟೇಶ ಶಹಪೂರಕರ ಅವರ ವೇದ ಪಠಣ ಮತ್ತು ವಚನದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸೋಮಲಿಂಗ ಮಾವಿನಕಟ್ಟಿ ಸ್ವಾಗತಿಸಿದರು. ಬಸವರಾಜ ಗಾರ್ಗಿ ವಂದಿಸಿದರು. ಅನ್ನಪೂರ್ಣಾ ಹಿರೇಮಠ ನಿರೂಪಿಸಿದರು.

# ರಬಕವಿಯ ರುದ್ರಭೂಮಿಯಲ್ಲಿ ಶಿವರಾತ್ರಿ ಆಚರಣೆ

**ರಬಕವಿ-ಬನಹಟ್ಟಿ :** ಶುಕ್ರವಾರ ಎಲ್ಲೆಡೆ ದೇವಸ್ಥಾನಗಳಲ್ಲಿ ಶಿವರಾತ್ರಿ ಆಚರಣೆ ನಡೆಸುತ್ತಿದ್ದರೆ, ರಬಕವಿಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ಪಟ್ಟಣದ ನೂರಾರು ಹಿರಿಯರು ಶಿವರಾತ್ರಿ ಆಚರಣೆಯಲ್ಲಿ ತೊಡಗಿದ್ದರು. ಹಿಂದೂ ರುದ್ರಭೂಮಿ ಸಮಿತಿ ಆಯೋಜಿಸಿದ್ದ ಶಿವರಾತ್ರಿಯ ಶಿವಧ್ಯಾನ ಎಲ್ಲರ ಗಮನ ಸೆಳೆಯಿತು. ರುದ್ರಭೂಮಿ ಮನುಷ್ಯನ ಮೋಕ್ಷ ಸ್ಥಳ. ಇಂತಹ ಪವಿತ್ರ ಸ್ಥಳದಲ್ಲಿ ಶಿವನ ಸಾನಿಧ್ಯವೂ ಇದೆ. ಈ ಬಗ್ಗೆ ಸಾಮಾಜಿಕ ಜಾಗೃತಿಯ ನಿಮಿತ್ಯವಾಗಿ ಶಿವರಾತ್ರಿಯ ದಿನ ಶಿವಾರಾಧನೆ ನಡೆಸಲಾಗುತ್ತಿರುವುದು ಹೆಮ್ಮೆಯೆಂದು ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಶ್ರೀಗಳು ಹೇಳಿದರು.

ದೇವಭೂಮಿಯೆಂದೇ ಹೆಸರಿಸಲಾದ ರುದ್ರಭೂಮಿಯಲ್ಲಿ ಶಿವನ ಮೂರ್ತಿ ಸಹಿತ ಇಡೀ ರುದ್ರಭೂಮಿಯನ್ನು ಅಲಂಕರಿಸಲಾಗಿತ್ತು.



**ವೇದಿಕೆಯಾದ ರುದ್ರಭೂಮಿ :** ಆಗಾಗ ಜಿಗುಪ್ಸೆಯಿಂದ ಅಂತ್ಯಸಂಸ್ಕಾರಕ್ಕೆಂದು ತೆರಳುವ ಜನತೆ, ಇಂದು ಶಿವರಾತ್ರಿ ನಿಮಿತ್ಯ ಎಲ್ಲರೂ ಖುಷಿ-ಖುಷಿಯಾಗಿ ರುದ್ರಭೂಮಿಗೆ ತಂಡೋಪತಂಡವಾಗಿ ಆಗಮಿಸಿ ಶಿವನ ಮೂರ್ತಿ ಮುಂಭಾಗದ ವೇದಿಕೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಶಿವರಾತ್ರಿಯ ಶುಭಾಶಯಗಳನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ ಪುರುಷ-ಮಹಿಳೆ ಎಂಬ ಬೇಧ ಭಾವವಿಲ್ಲದೆ ಮಕ್ಕಳಿಂದ ಹಿಡಿದು ವಯೋವೃದ್ಧರ ವರೆಗಿನ ಎಲ್ಲರೂ ಶಿವಧ್ಯಾನದಲ್ಲಿ ತೊಡಗಿದ್ದ ಅಪೂರ್ವ ಸನ್ನಿವೇಶ ಅಲ್ಲಿ ನಿರ್ಮಾಣಗೊಂಡಿತ್ತು.

ಪ್ರಭು ಉಮದಿ, ಶ್ರೀಕಾಂತ ಕೆಂಧೂಳಿ, ವಿಶ್ವನಾಥ ನಾಗರಾಳ, ಚಿದಾನಂದ ಗಾಳಿ, ಈರಣ್ಣ ಗುಣಕಿ, ಮಲ್ಲಿಕಾರ್ಜುನ ನಾಶಿ, ಶಿವಾನಂದ ಬಾಗಲಕೋಟ, ಬಸವರಾಜ ಯಂಡಿಗೇರಿ, ಬಸವರಾಜ ಮಟ್ಟಿಕಲ್ಲಿ, ರವಿ ಗುಣಕಿ, ತಮ್ಮಣ್ಣಿ ಕಾಮೋಜಿ, ಗುರಪಾದಯ್ಯ (ರಾಜು) ಅಮ್ಮಣಗಿ, ಚಿದಾನಂದ ಸೊಲ್ಲಾಪುರ, ಶೇಖರಕೊಟ್ರಶೆಟ್ಟಿ,ವಿಜಯಲಕ್ಷ್ಮಿ ಹತಪಕಿ,ಸಂಗೀತಾಮರೆಗುದ್ದಿ, ಮಂಜುಳಾ ಬೀಳಗಿ, ಅನುಪಮಾ ಗುಣಕಿ, ಮಹಾನಂದಾ ಗುಣಕಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

“SIHI KAHI” Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State